## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (389) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೆ 7 ನಗರ ಸಭೆ, 1 ಪುರ ಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡಿದ್ದು, ಇದರಿಂದಾಗಿ ಹಿಂದೆ ಇದ್ದ 100 ವಾರ್ಡ್‌ಗಳ ಬದಲಾಗಿ ಪ್ರಸ್ತುತ ಪಾಲಿಕೆಯಲ್ಲಿ 198 ವಾರ್ಡ್‌ಗಳು ವಿಂಗಡಣೆಗೊಂಡಿರುತ್ತದೆ.

ಈ ಪುನರ್ ವಿಂಗಡಣೆಯಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಮುಖ ಆಡಳಿತ ಕಛೇರಿಗಳಲ್ಲಿ ಕೆಲಸದ ಒತ್ತಡಗಳು ಹೆಚ್ಚಾಗಿದ್ದು, ಸದರಿ ಕಛೇರಿಗಳ ಪೈಕಿ ಕೌನ್ಸಿಲ್ ಕಾರ್ಯಾಲಯವು ಸಹ ಒಂದಾಗಿರುತ್ತದೆ. ಸದರಿ ಕೌನ್ಸಿಲ್ ಕಾರ್ಯಾಲಯದ ಅಧೀನದಲ್ಲಿ ಪೂಜ್ಯ ಮಹಾಪೌರರ ಕಛೇರಿ, ಉಪ ಮಹಾಪೌರರ ಕಛೇರಿ, ವಿವಿಧ ಪಕ್ಷದ ನಾಯಕರುಗಳ ಕಛೇರಿ ಹಾಗೂ 12 ಸ್ಥಾಯಿ ಸಮಿತಿಗಳಿದ್ದು, ಪ್ರತಿ ಸ್ಥಾಯಿ ಸಮಿತಿಗಳು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976ರ ಅಡಿಯಲ್ಲಿ ವಾರಕ್ಕೊಂದು ಸಭೆಯನ್ನು ನಡೆಸಬೇಕಾಗಿರುತ್ತದೆ. ಸದರಿ 12 ಸ್ಥಾಯಿ ಸಮಿತಿಗಳ ಪೈಕಿ ಎರಡು ಸ್ಥಾಯಿ ಸಮಿತಿಗಳು ದಿನಕ್ಕೊಂದು ಸಭೆಯನ್ನು ನಡೆಸುತ್ತಿದ್ದು, ಸದರಿ ಸಭೆಗಳಲ್ಲಿ ಪಾಲ್ಗೊಳ್ಳುವುದು, ಕೌನ್ಸಿಲ್ ಸಭೆಯ ವಿಷಯಗಳ ಸಭೆಯ ಅಜೆಂಡಾ ತಯಾರಿಕೆ ಹಾಗೂ ಇತರ ಜವಾಬ್ದಾರಿಯುತ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಕೌನ್ಸಿಲ್ ಕಾರ್ಯದರ್ಶಿ ಮತ್ತು ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮ ಟೇಬಲ್ ಬಿಲೋ ರೂಲ್ 26ರ ಅಡಿಯಲ್ಲಿ ಎರವಲು ಸೇವೆಯ ಮೇಲೆ ತುಂಬಲು ಅವಕಾಶವಿರುತ್ತದೆ ಹಾಗೂ ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು ಸಹಾಯಕ ಕಂದಾಯ ಅಧಿಕಾರಿ / ಹಿರಿಯ ಕಾನೂನು ಅಧಿಕಾರಿ ಹುದ್ದೆ ಹೊಂದಿದ್ದ ಅಧಿಕಾರಿಗಳು, ಕಾನೂನು ಪದವಿ ಹೊಂದಿರುವ ಅಧಿಕಾರಿಗಳಿಂದ ತುಂಬಲು ಅವಕಾಶವಿರುತ್ತದೆ.

ಸದರಿ ನಿಯಮಾವಳಿಯನ್ವಯ ಪ್ರಸ್ತುತ ಶ್ರೀ. ಮಾರಿಯೋ ಪಿರೀಸ್ ರವರು ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಮನವಿ ಸಲ್ಲಿಸಿ, ಪಾಲಿಕೆಗೆ ತಮ್ಮ ಸೇವೆಯು ಕೇವಲ ಎರಡು ವರ್ಷಗಳಿದ್ದು, ಕಾನೂನು ವಿಭಾಗದಲ್ಲಿ ತಮಗಿಂತ ಕಿರಿಯ ಅಧಿಕಾರಿಗಳು ತಮ್ಮ ಹುದ್ದೆಯ ಮೇಲ್ದರ್ಜೆಯ ಹುದ್ದೆಯಾದ ಉಪ ಕಾನೂನು ಅಧಿಕಾರಿ ಹುದ್ದೆಗೆ ಮುಂಬಡ್ತಿ ಹೊಂದಲು ಅವಕಾಶವಿದ್ದು, ತಮಗೆ ಮಾತ್ರ ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಿಂದ ಬೇರೆ ಯಾವುದೇ ಹುದ್ದೆಯ ಬಡ್ತಿಗೆ ಅವಕಾಶವಿಲ್ಲವೆಂದು ತಿಳಿಸಿ, ತಾವು ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿ ನಿವೃತ್ತಿ ಹೊಂದಬೇಕಾದ ಅನಿವಾರ್ಯತೆ ಇರುವುದಾಗಿ ತಿಳಿಸಿ, ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯ ವೇತನ ಶ್ರೇಣಿಯಾದ ರೂ.28,100-ರೂ.51,000 ಗಳಿಂದ ಮೇಲ್ದರ್ಜೆಯ ವೇತನ ಶ್ರೇಣಿ ರೂ.36,300- ರೂ.53,850 ಗಳಿಗೆ ನಿಗಧಿಪಡಿಸಿದ್ದಲ್ಲಿ, ತಾವು ಈಗಾಗಲೇ ಸದರಿ ವೇತನ ಶ್ರೇಣಿಯ ಕನಿಷ್ಠ ವೇತನ ರೂ.36,300/- ಗಳನ್ನು ಪಡೆಯುತ್ತಿರುವುದರಿಂದ ಒಂದು ವಾರ್ಷಿಕ ವೇತನ ಮೊತ್ತವಾದ ರೂ.900/- ಗಳನ್ನು ಮಾತ್ರ ಹೆಚ್ಚುವರಿಯಾಗಿ ಪಡೆಯಲು ಅವಕಾಶವಾಗಲಿದ್ದು, ಇದರಿಂದಾಗಿ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವೆಂದು ತಿಳಿಸಿ, ಅಧಿಕ ಕೌನ್ಸಿಲ್ ಕಾರ್ಯದರ್ಶಿಯ ಹುದ್ದೆಯನ್ನು ವೇತನ ಶ್ರೇಣಿ ರೂ.28,100-ರೂ.51,000 ರಿಂದ ವೇತನ ಶ್ರೇಣಿ ರೂ.36,300-53,850 ಗಳಿಗೆ ಮೇಲ್ದರ್ಜೆಗೇರಿಸುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, The alteration of establishment can be done under Article 107 of the Karnataka Financial Code 1958 ಕೆಳಕಂಡಂತೆ ವಿವರಿಸುತ್ತದೆ;

***"The Head of the Department or other authority concerned should scrutinize with the greatest care every proposal for an addition to an establishment. Whether permanent or temporary or for increase in the emoluments of an existing post. He should examine the financial implications thoroughly, and should not submit the proposal to the Government unless he satisfied that it is essential".***

ಮೇಲ್ಕಂಡ ನಿಯಮದನ್ವಯ ಯಾವುದೇ ಹುದ್ದೆಯ ವೇತನ ಶ್ರೇಣಿಯನ್ನು ಮೇಲ್ದರ್ಜೆಗೆ ಏರಿಸಬೇಕಾದ ಪಕ್ಷದಲ್ಲಿ ಇಲಾಖಾ ಮುಖ್ಯಸ್ಥರು ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಈ ರೀತಿ ವೇತನ ಶ್ರೇಣಿಯನ್ನು ಮೇಲ್ದರ್ಜೆಗೆ ಏರಿಸಿದ ಪಕ್ಷದಲ್ಲಿ ಇಲಾಖೆಗೆ ತಗಲಬಹುದಾದ ಅಧಿಕ ಆರ್ಥಿಕ ವೆಚ್ಚ ಮತ್ತು ಈ ರೀತಿ ಯಾವುದೇ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸಲು ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದಿರುತ್ತದೆ.

ಮೇಲ್ಕಂಡ ಅಂಶವನ್ನು ಅವಲೋಕಿಸಿದಾಗ, ಶ್ರೀ. ಮಾರಿಯೋ ಪಿರೀಸ್, ಅಧಿಕ ಕೌನ್ಸಿಲ್ ಕಾರ್ಯದರ್ಶಿ ರವರ ಸೇವೆಯು ಕೇವಲ ಎರಡು ವರ್ಷಗಳಿದ್ದು, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಿಂದ ಬೇರೆ ಯಾವುದೇ ಹುದ್ದೆಯ ಬಡ್ತಿಗೆ ಅವಕಾಶವಿಲ್ಲದೆ ಇದ್ದು, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯಲ್ಲಿಯೇ ನಿವೃತ್ತಿ ಹೊಂದಬೇಕಾದ ಕಾರಣ, ಅಧಿಕ ಕೌನ್ಸಿಲ್ ಕಾರ್ಯದರ್ಶಿ ಹುದ್ದೆಯ ವೇತನ ಶ್ರೇಣಿಯಾದ ರೂ.28,100–ರೂ.51,000 ಗಳಿಂದ ವೇತನ ಶ್ರೇಣಿ ರೂ.36,300–53,850 ಗಳಿಗೆ ಮೇಲ್ದರ್ಜೆಗೆ ಏರಿಸಿದ್ದಲ್ಲಿ, ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗದೇ ಇರುವುದು ಕಂಡುಬಂದಿರುವುದರಿಂದ, ತಾತ್ಕಾಲಿಕವಾಗಿ ಶ್ರೀ. ಮಾರಿಯೋ ಪಿರೀಸ್, ಅಧಿಕ ಕೌನ್ಸಿಲ್ ಕಾರ್ಯದರ್ಶಿ ರವರ ನಿವೃತ್ತಿಯವರೆಗೆ ಸದರಿಯವರ ವೇತನ ಶ್ರೇಣಿಯನ್ನು ರೂ.28,100–ರೂ.51,000 ರಿಂದ ವೇತನ ಶ್ರೇಣಿ ರೂ.36,300–53,850 ಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಸೂಕ್ತ ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–02–2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:04–02–2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11–02–2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11–02–2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11–02–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (390) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯು ದಿನಾಂಕ:17-01-2007 ರಂದು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/141/ಎಂಎಲ್ಆರ್/2006ರಂತೆ ಅಸ್ತಿತ್ವಕ್ಕೆ ಬಂದಿರುತ್ತದೆ. ಇದಕ್ಕಿಂತ ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣ 226 ಚ.ಕಿ.ಮೀ. ಗಳಾಗಿದ್ದು, ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುತ್ತದೆ. ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ. ವಿಸ್ತಾರಣೆಗೊಂಡಿದ್ದು, ಜನಸಂಖ್ಯೆಯು ಸುಮಾರು 80 ಲಕ್ಷ ಇರಬಹುದಾಗಿ ಅಂದಾಜಿಸಲಾಗಿದೆ. ಈ ಹಿನ್ನಲೆಯಲ್ಲಿ, ಪಾಲಿಕೆಯ ಕಾರ್ಯಕ್ಷೇತ್ರ ವಿಸ್ತರಣಗೊಂಡಿದ್ದು, ಇದಕ್ಕೆ ಅನುಗುಣವಾಗಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಕಾರಣ ಸಾಮಾನ್ಯ ಆಡಳಿತ, ಕಂದಾಯ, ಕಾಮಗಾರಿ, ಆರೋಗ್ಯ, ತೋಟಗಾರಿಕೆ, ನಗರ ಯೋಜನೆ, ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಅರಣ್ಯ ಮತ್ತು ಇತರೇ ಇಲಾಖೆಗಳಲ್ಲಿ ಕೆಲಸ ಒತ್ತಡ / ಪ್ರಮಾಣ ಹೆಚ್ಚಾಗಿದ್ದು, ಅಗತ್ಯ ಮೂಲಭೂತ ಸೌಕರ್ಯಗಳನ್ನು ಬೆಂಗಳೂರಿನ ಜನತೆಗೆ ಕಲ್ಪಿಸಲು ಮೇಲ್ಕಂಡ ಎಲ್ಲಾ ಪಾಲಿಕೆ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಅನಿವಾರ್ಯತೆ ಇರುತ್ತದೆ. ಗುಣಮಟ್ಟದ ಮಾನವ ಸಂಪನ್ಮೂಲವಿಲ್ಲದೇ ಅಂತರ್ ರಾಷ್ಟ್ರೀಯ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸುವುದು / ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.

ಕಳೆದ 40 ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ - ಆಡಳಿತ ಕ್ಷೇತ್ರಗಳಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿದ್ದು, ಹೊಸ ಸವಾಲುಗಳು ಎದುರಾಗಿರುತ್ತವೆ ಹಾಗೂ ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ, ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು, ಸವಾಲುಗಳಿಗೆ ಸರಿಯಾದ ಉತ್ತರಗಳನ್ನು ಕೊಡುವ ಪಾರದರ್ಶಕ ಮತ್ತು ಉತ್ತರದಾಯಿತ್ವಯುಳ್ಳ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುಂಚೆ (ಅಂದರೆ, ದಿನಾಂಕ:17-01-2007 ಕ್ಕಿಂತ ಮುಂಚೆ) ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಸಂಖ್ಯೆ:6,60,000/- ಆಸ್ತಿಗಳು ಇದ್ದು, ಬೆಂಗಳೂರು ಮಹಾನಗರ ಪಾಲಿಕೆಯು ಸುತ್ತಮುತ್ತಲಿನ 110 ಗ್ರಾಮಗಳು, 7 ನಗರಸಭೆ ಮತ್ತು 1 ಪುರಸಭೆ ಪ್ರದೇಶಗಳನ್ನು ಒಳಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಒಟ್ಟು 15,00,000/- ಆಸ್ತಿಗಳು ಇರುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.650.00 ಕೋಟಿಗಳಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.1,100 ಕೋಟಿಗಳಷ್ಟು ಆಗಿರುತ್ತದೆ.

ದಿನಾಂಕ:17-01-2007 ಕ್ಕಿಂತ ಮುಂಚೆ ಪಾಲಿಕೆ ವ್ಯಾಪ್ತಿಯಲ್ಲಿ 390 ಸಂಖ್ಯೆಯಷ್ಟು ಉದ್ಯಾನವನಗಳು ಇದ್ದು, ಪ್ರಸ್ತುತ 673 ಸಂಖ್ಯೆಯ ಉದ್ಯಾನವನಗಳು ಅಭಿವೃದ್ಧಿಪಡಿಸಲಾಗಿದೆ. ಇನ್ನೂ 262 ಜಾಗಗಳಲ್ಲಿ ಸಮಗ್ರವಾಗಿ ಉದ್ಯಾನವನಗಳ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೆಟ್ರೋ ಯೋಜನೆಯನ್ನು ರೂ.6395 ಕೋಟಿ ವೆಚ್ಚ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕೂಡ ಈಗಾಗಲೇ ಅಭಿವೃದ್ಧಿಪಡಿಸಿದ್ದು, ಕಾರ್ಯಗತಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ 2084 ಸಂಖ್ಯೆಯಷ್ಟು ಐ.ಟಿ. ಬಿ.ಟಿ. ಕಂಪನಿಗಳಿರುತ್ತವೆ. ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹೊಸ ಹುದ್ದೆಗಳ ಹಾಗೂ ಕೆಲವು ಅಗತ್ಯ ಹುದ್ದೆಗಳು ಅಧಿಕವಾಗಿ ಸೃಷ್ಟಿಯಾಗಬೇಕಾಗಿರುತ್ತದೆ.

ಶ್ರೀಮತಿ. ಹರಿಣಿ ವನಜ ಕುಮಾರಿ, ನಿವೃತ್ತ ಕೆ.ಎ.ಎಸ್. ರವರನ್ನು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಪಾಲಿಕೆಯಿಂದ ನೇಮಕ ಮಾಡಿಕೊಳ್ಳಲಾಗಿದೆ. ಸದರಿಯವರು ವಿವಿಧ ಇಲಾಖೆಗಳ ಹುದ್ದೆಗಳ ಕಾರ್ಯವೈಖರಿ ಬಗ್ಗೆ ಅಧ್ಯಯನ ನಡೆಸಿ, ಇಲಾಖಾ ಮುಖ್ಯಸ್ಥರೊಂದಿಗೆ ಚರ್ಚಿಸಿ, ಆಡಳಿತ ಇಲಾಖಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿ ರವರು ನಡೆಸಿದ ಸಭೆ ನಡವಳಿಕೆಗಳ ಸೂಚನೆ ಅನುಸರಿಸಿ ಎಲ್ಲಾ ಹುದ್ದೆಗಳ ಕಾರ್ಯವೈಖರಿಯ ಮನರಾವಲೋಕನೆ ಮಾಡಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಕಡತವನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಷ್ಕರಣಾ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಕೆಲವೊಂದು ತಿದ್ದುಪಡಿಯೊಂದಿಗೆ ಸದರಿ ಕರಡನ್ನು ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನಡವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಯ ಹಿನ್ನಲೆಯಲ್ಲಿ, ಅವಶ್ಯವಿಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು ಕೂಡ ಪ್ರಸ್ತಾಪಿಸಲಾಗಿರುತ್ತದೆ. ಅತ್ಯಾವಶ್ಯಕವಾಗಿ ಬೇಕಾಗಿರುವ ಹುದ್ದೆಗಳನ್ನು ಸೃಜಿಸಲು / ಹೆಚ್ಚುವರಿಗೊಳಿಸಲು ಅಥವಾ ಕಡಿಮೆ ದರ್ಜೆಗೊಳಿಸಲು ಪ್ರಸ್ತಾಪಿಸಲಾಗಿರುತ್ತದೆ.

ಈ ಹೊಸ ಹುದ್ದೆಗಳನ್ನು ಸೃಜಿಸುವುದರಿಂದ ಆಗುವ ಆರ್ಥಿಕ ಹೊರೆಯನ್ನು ಕೂಡ ಪರಿಗಣಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಕೆಲವು ಶ್ರೇಣಿಯ ಹುದ್ದೆಗಳು ಇಲ್ಲದೆ ಇದ್ದರೂ ಕೂಡ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆಗೆದುಕೊಂಡು ಮಹಾನಗರ ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಈಗ ಪ್ರಸ್ಥಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಸೃಜಿಸಲು ಕಾನೂನಿನಲ್ಲಿ ಯಾವುದೇ ತೊಡಕು ಬಾರದಂತೆ ಕ್ರಮ ವಹಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸಲ್ಲಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಮಾವಳಿಗಳನ್ನು ಲಗತ್ತು ನಿಗಧಿತ ನಮೂನೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-07-2012ರ ಟಿಪ್ಪಣಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆ ಹೊಂದಿ ಪಾಲಿಕೆಯ ವಿಸ್ತೀರ್ಣವು 226 ಚ.ಕಿ.ಮೀ.ಗಳಿಂದ 800 ಚ.ಕಿ.ಮೀ.ಗಳಿಗೆ ವಿಸ್ತೀರ್ಣಗೊಂಡಿದ್ದು, ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹತ್ತು ಹಲವು ಹೊಸ ಹುದ್ದೆಗಳ ಸೃಜನೆ, ಅಗತ್ಯತೆಗೆ ಅನುಸಾರವಾಗಿ ಹಾಲಿ ಇರುವ ಹುದ್ದೆಗಳನ್ನು ಹೆಚ್ಚುವರಿಯಾಗಿ ಪರಿಷ್ಕರಿಸಲಾಗಿದ್ದು, ಈ ಹಿನ್ನಲೆಯಲ್ಲಿ 1971 ರಲ್ಲಿ ರಚಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪುನರ್ ಪರಿಷ್ಕರಿಸುವುದು ಅತ್ಯಗತ್ಯವಾಗಿದ್ದು, ಈ ಮೇರೆಗೆ ಪಾಲಿಕೆಯಲ್ಲಿ ಹಾಲಿ ಅನುಷ್ಠಾನದಲ್ಲಿರುವ ಎಲ್ಲಾ ಇಲಾಖಾ ಮುಖ್ಯಸ್ಥರುಗಳೊಂದಿಗೆ ಅವರುಗಳ ಇಲಾಖೆಯ ಕಾರ್ಯವೈಖರಿ ಕುರಿತಂತೆ ಕೂಲಂಕುಷವಾಗಿ ಚರ್ಚಿಸಿ ಅಗತ್ಯತೆಗೆ ಅನುಸಾರವಾಗಿ ಹುದ್ದೆಗಳನ್ನು ಸೃಜಿಸಲು ಹಾಗೂ ಹೆಚ್ಚುವರಿಯಾಗಿರುವ ಹುದ್ದೆಗಳನ್ನು ರದ್ದುಪಡಿಸಲು ಸಹ ಕ್ರಮಕೈಗೊಳ್ಳಲಾಗಿರುತ್ತದೆ. ಹಾಲಿ 1971 ರಲ್ಲಿ ರಚನೆಯಾದ ವೃಂದ ಮತ್ತು ನೇಮಕಾತಿ ನಿಯಮಾವಳಿಯ ರೀತ್ಯಾ ತಹಲ್‌ವರೆವಿಗೂ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆ ಹೊಂದಿದ ನಂತರ 198 ವಾರ್ಡ್‌ಗಳು ರಚನೆಗೊಂಡು ಈ ಎಲ್ಲಾ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ಸಾರ್ವಜನಿಕರ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವ ಸಲುವಾಗಿ ಹಾಗೂ ಪಾಲಿಕೆಯ ಆರ್ಥಿಕ ಸ್ಥಿತಿಗತಿಯನ್ನು ಪರಿಗಣಿಸಿ ಅಗತ್ಯತೆಗೆ ಅನುಸಾರವಾಗಿ ಹೊಸ ಹುದ್ದೆಗಳನ್ನು ಸೃಜಿಸಿರುವುದೇ ಅಲ್ಲದೆ ಪಾಲಿಕೆಯಲ್ಲಿ ಉಪಯುಕ್ತತೆ ಇಲ್ಲದೇ ಇರುವ ಹುದ್ದೆಗಳನ್ನು ಸಹ ರದ್ದುಪಡಿಸುವಲ್ಲಿ ಸಮಿತಿಯು ಅಧಿಕಾರಿಗಳ ಸಹಯೋಗದೊಂದಿಗೆ ಸಾಕಷ್ಟು ಕಸರತ್ತನ್ನು ಮಾಡಿರುತ್ತದೆ. ಈ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆ, ಅರಣ್ಯ ಇಲಾಖೆಯಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹಿರಿಯ ಹಾಗೂ ಕಿರಿಯ ಅಧಿಕಾರಿಗಳನ್ನು ಅಗತ್ಯತೆಗೆ ಅನುಸಾರವಾಗಿ ಉಳಿಸಿಕೊಂಡು ಅಧಿಕ ಹುದ್ದೆಗಳನ್ನು ರದ್ದುಪಡಿಸಲಾಗಿರುತ್ತದೆ. ಇದರಿಂದ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಹತೋಟಿಯಲ್ಲಿಡಲು ಸಾಧ್ಯವಾಗಿರುತ್ತದೆ.

........................3

ಅತಿ ಮುಖ್ಯವಾಗಿ ಪಾಲಿಕೆಯ 8 ವಲಯ ಕಛೇರಿ ಹಾಗೂ ಕೇಂದ್ರ ಕಛೇರಿಯಲ್ಲಿ ಮಂಜೂರಾತಿಯಿಲ್ಲದ ಹುದ್ದೆಗಳಿಗೆ IFS, IAS, KAS ಹಾಗೂ ಈ ಶ್ರೇಣಿಗಳಲ್ಲದ ಹಿರಿಯ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದು, ಈ ಪ್ರಕ್ರಿಯೆಯಿಂದಾಗಿ ಸದರಿ ಅಧಿಕಾರಿಗಳಿಗೆ ಯಾವುದೇ ವಿಧವಾದ ಹೆಚ್ಚುವರಿ ಕೆಲಸ ಕಾರ್ಯಗಳು ಇಲ್ಲದ ಹೊರತಾಗಿಯು ಈ ಹುದ್ದೆಗಳಲ್ಲಿ ಕೆಳಹಂತದ ಅಧಿಕಾರಿಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು, ಇದರಿಂದಾಗಿ ಹೆಚ್ಚುವರಿ ಹುದ್ದೆಯಲ್ಲಿನ ಅಧಿಕಾರಿಗಳ ವೇತನ ಹಾಗೂ ಅವರುಗಳ ಕಛೇರಿ ನಿರ್ವಹಣೆಗಾಗಿ ಅಧಿಕ ಪ್ರಮಾಣದಲ್ಲಿ ಆರ್ಥಿಕ ವೆಚ್ಚವಾಗುತ್ತಿದ್ದು, ಇವುಗಳನ್ನು ತಡೆಗಟ್ಟಿದ ಪಕ್ಷದಲ್ಲಿ ಪಾಲಿಕೆಗೆ ಹೆಚ್ಚಿನ ಉಳಿತಾಯವನ್ನು ಕಾಣಬಹುದಾಗಿರುವುದರಿಂದ ಈ ನಿಟ್ಟಿನಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಂಟಿ ಆಯುಕ್ತರು (ಕಲ್ಯಾಣ) ಹಾಗೂ 8 ವಲಯಗಳಲ್ಲಿನ ಉಪ ಆಯುಕ್ತರುಗಳ ಹುದ್ದೆಯನ್ನು ರದ್ದುಪಡಿಸಲಾಗಿರುತ್ತದೆ ಹಾಗೂ ಇನ್ನು ಮುಂದೆ IFS, IAS, KAS ಅಲ್ಲದ ಅಧಿಕಾರಿಗಳನ್ನು ಯಾವುದೇ ಸಂದರ್ಭದಲ್ಲಿಯು ನಿಯೋಜಿಸತಕ್ಕದ್ದಲ್ಲವೆಂದು ಸರ್ಕಾರವನ್ನು ಕೋರಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಇದೇ ರೀತಿ ಕಾಮಗಾರಿ ಇಲಾಖೆಯಲ್ಲಿಯು ಸಹ ಮಂಜೂರಾತಿಯಾದ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆಗೊಳ್ಳುತ್ತಿರುವುದೇ ಅಲ್ಲದೆ ಈ ಹಿಂದಿನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೇವಲ ಲೋಕೋಪಯೋಗಿ ಇಲಾಖೆಯಿಂದ ಮಾತ್ರ ಎರವಲು ಸೇವೆಯ ಮೇಲೆ ನಿಯೋಜನೆ ಹೊಂದಲು ಅವಕಾಶವಿದ್ದು, ಇದನ್ನು ಹೊರತುಪಡಿಸಿ ಸರ್ಕಾರದ ಅಂಗ ಸಂಸ್ಥೆಗಳಾದ KSFC, BESCOM, KPTCL ಹಾಗೂ ಇನ್ನಿತರೆ ಸಂಸ್ಥೆಗಳಿಂದ ಅಭಿಯಂತರರುಗಳು ಹಾಗೂ ಇನ್ನಿತರ B ಮತ್ತು C ದರ್ಜೆ ಸಿಬ್ಬಂದಿಗಳನ್ನು ಸರ್ಕಾರವು ಪಾಲಿಕೆಯ ಸೇವೆಗೆ ನಿಯೋಜಿಸುತ್ತಿದ್ದು, ಇದರಿಂದಾಗಿ ಮೇಲ್ಕಂಡ ಸರ್ಕಾರದ ಅಂಗ ಸಂಸ್ಥೆಗಳ ಸಿಬ್ಬಂದಿ ವೇತನವು ಸರ್ಕಾರದ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಗಳ ವೇತನ ಶ್ರೇಣಿಗಿಂತ ಹೆಚ್ಚುವರಿಯಾಗಿದ್ದು, ಪಾಲಿಕೆಯ ಹಾಗೂ ಲೋಕೋಪಯೋಗಿ ಇಲಾಖೆಯ ಅಭಿಯಂತರರುಗಳು ನಿರ್ವಹಿಸುವ ಕಛೇರಿ ಕೆಲಸ ಕಾರ್ಯವನ್ನು ಸರ್ಕಾರಿ ಅಂಗ ಸಂಸ್ಥೆಯ ಅಭಿಯಂತರರುಗಳು ನಿರ್ವಹಿಸಿದ್ದಾಗ್ಯೂ ಸಹ ಅವರು ಹೆಚ್ಚುವರಿ ವೇತನವನ್ನು ಪಡೆಯುತ್ತಿದ್ದು, ಇದರಿಂದಾಗಿ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ಹೊರೆಯುಂಟಾಗುತ್ತಿದ್ದು, ಸರ್ಕಾರದ ಅಂಗಸಂಸ್ಥೆಯ ಎರವಲು ಸೇವೆಯ ನಿಯೋಜನೆಯ ಸಿಬ್ಬಂದಿಗಳು ಕಟ್ಟುನಿಟ್ಟಾಗಿ ನಿಯಂತ್ರಿಸುವುದು ಅತ್ಯಾವಶ್ಯಕವಾಗಿರುತ್ತದೆ. 1977ರ ಕೆ.ಎಂ.ಸಿ ಕಾಯ್ದೆ ನಿಯಮ 26(ಎ) ರೀತ್ಯಾ ಆಯುಕ್ತರು ಯಾವುದೇ ಅಧಿಕಾರಿಯನ್ನು ಸರ್ಕಾರದಿಂದ ಎರವಲು ಸೇವೆಯ ಮೇಲೆ ಅವನು ಹೆಚ್ಚಿನ ಪರಿಣಿತಿ ಹಾಗೂ ಹೆಚ್ಚಿನ ಅನುಭವದ ಆಧಾರದ ಮೇಲೆ ಪಾಲಿಕೆಯ ಸೇವೆಗೆ ತೆಗೆದುಕೊಳ್ಳಲು ಅವಕಾಶವಿದ್ದು ಈ ಪ್ರಕ್ರಿಯೆಯಿಂದಾಗಿ ಪಾಲಿಕೆಯ ಆರ್ಥಿಕ ಸ್ಥಿತಿಗತಿಗೆ ನಷ್ಟ ಉಂಟಾಗುತ್ತಿರುವ ಕಾರಣ, ದಿನಾಂಕ:08.08.2011ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಸದರಿ ನಿಯಮವನ್ನು ತಿದ್ದುಪಡಿ ಮಾಡಲು ತೀರ್ಮಾನಿಸಲಾಗಿರುತ್ತದೆ. ಈ ಪ್ರಸ್ತಾವನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಜಂಟಿ ಸಮಿತಿಯು ಸ್ಪಷ್ಟವಾಗಿ ನಿರ್ದೇಶನ ನೀಡಿರುತ್ತದೆ. ಪಾಲಿಕೆಯಲ್ಲಿ ಅತಿ ಮುಖ್ಯವಾಗಿ ಹೊರಗುತ್ತಿಗೆ ಆಧಾರದ ಮೇಲೆ ಹಲವು ವೃಂದದ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು ವಾಡಿಕೆಯಾಗಿದ್ದು, ಈ ನೇಮಕವು ಹಲವು ವಿಧವಾದ ಲೋಪದೋಷಗಳಿಂದ ಕೂಡಿದ್ದು, ಈ ಪ್ರಕ್ರಿಯೆಯಿಂದಾಗಿ (ಉದಾಹರಣೆಗೆ D.E.O ಹಾಗೂ ಶಿಕ್ಷಕರುಗಳನ್ನು) ಅಗತ್ಯತೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೊರಗುತ್ತಿಗೆ ನೌಕರರುಗಳು ಪಾಲಿಕೆಯಲ್ಲಿ ನಿಗಧಿತ ಅವರಿಗೆ ಕಾರ್ಯನಿರ್ವಹಿಸಲು ನೇಮಕಗೊಂಡಿದ್ದು, ಸದರಿ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆ ಇಲ್ಲದಿದ್ದಾಗ್ಯೂ ಸಹ ಗುತ್ತಿಗೆದಾರ ಸಂಸ್ಥೆಯು ಈ ಬಗ್ಗೆ ಗಮನಹರಿಸದೆ ಕಾರ್ಯ ಪ್ರವೃತ್ತರಾಗಿರುವುದರಿಂದ ಪಾಲಿಕೆಗೆ ಹೆಚ್ಚುವರಿ ನಷ್ಟ ಉಂಟಾಗಿರುವುದೇ ಅಲ್ಲದೆ, ಸದರಿ ಗುತ್ತಿಗೆ ನೌಕರರಿಂದ ಹಲವು ವಿಧವಾದ ಕರ್ತವ್ಯ ಲೋಪದೋಷಗಳು ಉಂಟಾಗುತ್ತಿದ್ದು, ಈ ಬಗ್ಗೆ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ಮೇಲ್ಕಂಡ ಹೊರಗುತ್ತಿಗೆ ನೌಕರರುಗಳನ್ನು ನಿಯಂತ್ರಿಸುವಲ್ಲಿ ಪೂರ್ಣ ಪ್ರಮಾಣದಲ್ಲಿ ವಿಫಲರಾಗಿರುವುದರಿಂದ ಇನ್ನು ಮುಂದೆ ಪಾಲಿಕೆಯಲ್ಲಿ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣ ಪ್ರಮಾಣದಲ್ಲಿ ತಡೆಹಿಡಿಯಲು ಜಂಟಿ ಸಮಿತಿಯು ತೀರ್ಮಾನಿಸುತ್ತಾ, ಇತ್ತೀಚಿನ ಸರ್ಕಾರದ ಆದೇಶದ ರೀತ್ಯಾ ನೇರನೇಮಕಾತಿ ಹೊಂದುವ ಸಂದರ್ಭದಲ್ಲಿನ ನೌಕರರು ಗಣಕಯಂತ್ರ ವಿಷಯದಲ್ಲಿ ವಿದ್ಯಾರ್ಹತೆ ಅವಶ್ಯವೆಂದು ಆದೇಶಿಸಿದ್ದು ಹಾಗೂ ಹಾಲಿ

........................4

ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಪೈಕಿ ಗಣಕಯಂತ್ರ ವಿಷಯದಲ್ಲಿ ಅಗತ್ಯ ವಿದ್ಯಾರ್ಹತೆಯನ್ನು ನಿಗಧಿತ ಅವಧಿಯಲ್ಲಿ ಉತ್ತೀರ್ಣರಾಗತಕ್ಕದೆಂದು ತಿಳಿಸಿದ್ದು, ಈ ಮೇರೆಗೆ ಎಲ್ಲಾ ವಿಷಯ ನಿರ್ವಾಹಕರು ಹಾಗೂ C ದರ್ಜೆ ಸಿಬ್ಬಂದಿ ವರ್ಗದವರಿಗೆ ಗಣಕಯಂತ್ರ ವಿಷಯದಲ್ಲಿ ಪರಿಣಿತಿ ಹೊಂದುವುದು ಕಡ್ಡಾಯವಾಗಿರುವುದರಿಂದ ಹಾಗೂ ನೇರ ನೇಮಕಾತಿ ಮೂಲಕ DEO ಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮಕೈಗೊಳ್ಳುತ್ತಿರುವುದರಿಂದ ಇನ್ನು ಮುಂದೆ ಹೊರ ಗುತ್ತಿಗೆ ಆಧಾರದ ಮೇಲೆ DEO ಗಳನ್ನು ನೇಮಕ ಮಾಡಿಕೊಳ್ಳುವ ಕ್ರಮವನ್ನು ರದ್ದುಗೊಳಿಸಲು ಜಂಟಿ ಸಮಿತಿಯು ತೀರ್ಮಾನಿಸಿದೆ. ಇದೇ ಆಧಾರದ ಮೇಲೆ ಪಾಲಿಕೆಯಲ್ಲಿ ಹಾಲಿ ಖಾಲಿ ಇರುವ ಶಿಕ್ಷಕರುಗಳ ಹುದ್ದೆಯನ್ನು ಸಹ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿದ್ದು, ಈ ಒಂದು ಪ್ರಕ್ರಿಯೆಯಲ್ಲಿಯು ಸಹ ಅಗತ್ಯತೆಗಿಂತ ಅಧಿಕವಾಗಿ ಅಂದರೆ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯ ಅನುಪಾತವನ್ನು ಸಮಂಜಸವಾಗಿ ಪರಿಗಣಿಸದೆ ಮನಸೋ ಇಚ್ಛೆಯಂತೆ ನೇಮಕ ಮಾಡಿಕೊಳ್ಳುತ್ತಿರುವುದೇ ಅಲ್ಲದೆ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರುಗಳನ್ನು ನೇಮಿಸಿಕೊಳ್ಳುತ್ತಿರುವುದರಿಂದ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ನಷ್ಟ ಉಂಟಾಗುತ್ತಿರುವುದೇ ಅಲ್ಲದೆ ಸದರಿ ಶಿಕ್ಷಕರುಗಳು ವಿದ್ಯಾರ್ಥಿಗಳಿಗೆ ಬೋಧನ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಅರ್ಹರಿರುವರೆ ಎಂಬ ಬಗ್ಗೆ ಯಾವೊಬ್ಬ ಅಧಿಕಾರಿಗಳು ಪರಿಶೀಲಿಸದೆ ಇರುವುದು ಈ ಒಂದು ಸಂದರ್ಭದಲ್ಲಿ ಗಮನಿಸಬಹುದಾಗಿದ್ದು, ಈ ಹಿನ್ನಲೆಯಲ್ಲಿ, ಪಾಲಿಕೆಯ ವಿದ್ಯಾ ಇಲಾಖೆಯ ಹಿತದೃಷ್ಟಿಯಿಂದ ಕೂಡಲೇ ಶಿಕ್ಷಕರುಗಳನ್ನು ನೇರ ನೇಮಕಾತಿಯ ಮೂಲಕ ತುಂಬಲು ಸೂಕ್ತ ಅನುಮತಿಯನ್ನು ನೀಡಲು ಸರ್ಕಾರವನ್ನು ಕೋರಲು ಜಂಟಿ ಸಮಿತಿಯು ತೀರ್ಮಾನಿಸುತ್ತದೆ. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರುಗಳು ಅವರುಗಳು ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಲ್ಲಿಯೇ ವೇತನ ಬಟವಾಡೆ ಪಡೆಯುತ್ತಿದ್ದು, ಇದರಿಂದಾಗಿ 8 ವಲಯ ಕಛೇರಿ ಹಾಗೂ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರುಗಳ ಬಗ್ಗೆ ಸಮರ್ಪಕವಾದ ಮಾಹಿತಿ ಇಲ್ಲದೆ ಇರುವುದರಿಂದ ಎಲ್ಲಾ ಚಾಲಕರುಗಳ ಪೂರ್ಣ ಪ್ರಮಾಣದ ಮಾಹಿತಿಯ ಕೊರತೆ ಇರುವುದರಿಂದ ಎಲ್ಲಾ ಚಾಲಕರುಗಳ ಸೇವಾ ವಿವರವನ್ನು ಕೇಂದ್ರ ಕಛೇರಿಯಲ್ಲಿಯೇ ವ್ಯವಹರಿಸುವ ಸಲುವಾಗಿ ಸೂಕ್ತ ಕ್ರಮಕೈಗೊಂಡು ಅವರುಗಳು ಕಾರ್ಯನಿರ್ವಹಿಸುವ ಕಛೇರಿಯ ಅಗತ್ಯ ಮಾಹಿತಿಯನ್ನು ದಾಖಲು ಮಾಡುವುದು ಸೂಕ್ತವೆಂದು ಅಭಿಪ್ರಾಯಿಸಿ, ಕೇಂದ್ರ ಕಛೇರಿಯಲ್ಲಿರುವ ಸಾರಿಗೆ ಅಧಿಕಾರಿಗಳ ನಿಯಂತ್ರಣದಲ್ಲಿ ಎಲ್ಲಾ ಚಾಲಕರುಗಳ ಸೇವಾ ಪುಸ್ತಕವನ್ನು ಸಂಗ್ರಹಿಸಿಟ್ಟ ಪಕ್ಷದಲ್ಲಿ ಪಾಲಿಕೆಯ ವಾಹನಗಳ ದುರುಪಯೋಗವನ್ನು ತಡೆಗಟ್ಟುವುದೇ ಅಲ್ಲದೆ ಇಂಧನಗಳ ದುಂದು ವೆಚ್ಚವನ್ನು ನಿಯಂತ್ರಿಸಬಹುದೆಂದು ಜಂಟಿ ಸಮಿತಿಯು ತೀರ್ಮಾನಿಸಿದೆ.

ಹಾಲಿ ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ ಸರ್ಕಾರವು ಹಲವು ಹತ್ತು ಯೋಜನೆಗಳನ್ನು ರೂಪಿಸಲು ಶೇ.22.75ರ ಅಡಿಯಲ್ಲಿ ಹೆಚ್ಚಿನ ಮೊತ್ತದ ಅನುಧಾನವನ್ನು ನಿಗಧಿಪಡಿಸಿದ್ದು, ಈ ಅನುದಾನದಡಿಯಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮೇಲ್ಕಂಡ ಅನುದಾನದಡಿಯಲ್ಲಿ ಕಾರ್ಯಪ್ರವೃತ್ತರಾಗಲು ಆದೇಶಿಸಿದ್ದರೂ ಸಹ ಈ ಒಂದು ಪ್ರಕ್ರಿಯೆಯಲ್ಲಿ ಸಮರ್ಪಕವಾದ ರೀತಿಯಲ್ಲಿ ಯೋಜನೆಗಳು ಕಾರ್ಯಗತಗೊಳ್ಳುವಲ್ಲಿ ವಿಫಲವಾಗುತ್ತಿದ್ದು, ಈ ಹಿನ್ನಲೆಯಲ್ಲಿ ವಲಯ ಮಟ್ಟದಲ್ಲಿ ಸಹಾಯಕ ಕಲ್ಯಾಣ ಅಧಿಕಾರಿಗಳನ್ನು ನೇಮಕ ಮಾಡಲು ಸದರಿ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಜಂಟಿ ಸಮಿತಿಯು ತೀರ್ಮಾನಿಸಿದ್ದು ಹಾಗೂ ಹಾಲಿ ಕೇಂದ್ರ ಕಛೇರಿಯಲ್ಲಿ ಇರುವ ಜಂಟಿ ಆಯುಕ್ತರು (ಕಲ್ಯಾಣ), ಉಪ ಆಯುಕ್ತರು (ಕಲ್ಯಾಣ) ಮತ್ತು ಕಲ್ಯಾಣ ಅಧಿಕಾರಿಗಳ ಹುದ್ದೆಯಿದ್ದು, ಅನಾವಶ್ಯಕವಾಗಿ ಹೆಚ್ಚುವರಿ ಹುದ್ದೆ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಜಂಟಿ ಆಯುಕ್ತರು (ಕಲ್ಯಾಣ) ಹುದ್ದೆಯನ್ನು ರದ್ದುಪಡಿಸುವುದು ಸೂಕ್ತವೆಂದು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಕಾಮಗಾರಿ ಇಲಾಖೆಯಲ್ಲಿ ಹಾಲಿ ಮಂಜೂರಾತಿಯಲ್ಲಿರುವ ಗ್ಯಾಂಗ್‌ಮೆನ್‌ಗಳ ಪೈಕಿ ಶೇ.50 ಕ್ಕಿಂತ ಕಡಿಮೆ ಹುದ್ದೆಗಳಲ್ಲಿ ಮಾತ್ರ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಪಾಲಿಕೆಯಲ್ಲಿ ತುಂಡು ಹೊರಗುತ್ತಿಗೆ ಪದ್ಧತಿಯಲ್ಲಿ ವಾರ್ಡ್ ಮಟ್ಟದಲ್ಲಿ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಈ ಹಿನ್ನಲೆಯಲ್ಲಿ

.......................5

ಮಂಜೂರಾತಿ ಹುದ್ದೆಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್‌ಗಳಿಗೆ ಯಾವುದೇ ವಿಧವಾದ ಕೆಲಸಕಾರ್ಯಗಳಿಲ್ಲದೆ ಇರುವ ಹಿನ್ನಲೆಯಲ್ಲಿ ಹಾಗೂ ಕಾರ್ಯನಿರ್ವಹಿಸುತ್ತಿರುವ ಕೆಲವೇ ಮಂದಿ ನೌಕರರುಗಳ ಪೈಕಿ ಹಲವು ಮಂದಿ ನಿಯೋಜನೆ ಮೇರೆಗೆ ಇತರೆ ಕಛೇರಿಗಳಲ್ಲಿ ಗ್ಯಾಂಗ್‌ಮೆನ್ ಅಲ್ಲದ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ, ಈ ಪ್ರಸ್ತುತ ಈ ಹುದ್ದೆಯು ಅವಶ್ಯಕತೆ ಇಲ್ಲದಿರುವುದರಿಂದ ಸದರಿ ಹುದ್ದೆಯನ್ನು ರದ್ದು ಪಡಿಸಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಇದೇ ನಿಟ್ಟಿನಲ್ಲಿ ನಗರ ಯೋಜನೆ ವಿಭಾಗದಲ್ಲಿಯೂ ಸಹ ಹೆಚ್ಚುವರಿಯಾಗಿದ್ದಂತಹ ಹುದ್ದೆಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಹಾಲಿ ಇರುವ ಎರಡು ಜಂಟಿ ನಿರ್ದೇಶಕರ ಹುದ್ದೆಯನ್ನು ರದ್ದು ಪಡಿಸಲಾಗಿರುತ್ತದೆ ಹಾಗೂ 8 ವಲಯಗಳಿಗೆ ವಲಯಕ್ಕೆ ಒಂದು ಸಹಾಯಕ ನಿರ್ದೇಶಕರ ಹುದ್ದೆಯನ್ನು ಮಾತ್ರ ನಿಗಧಿ ಪಡಿಸಲಾಗಿರುತ್ತದೆ. ಪಾಲಿಕೆಯ ಲೆಕ್ಕ ಪತ್ರ ಇಲಾಖೆಯಲ್ಲಿ ಈ ಹಿಂದೆ ಶೇಕಡ 75 ರಷ್ಟು ಹುದ್ದೆಗಳನ್ನು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಎರವಲು ಸೇವೆಯ ಮೂಲಕ, ಉಳಿದ ಹುದ್ದೆಗಳನ್ನು ಪಾಲಿಕೆಯ ನೌಕರರ ವೃಂದದಿಂದ ತುಂಬುತ್ತಿದ್ದು ಇದರಿಂದಾಗಿ ಎರವಲು ಸೇವೆಯ ಮೇಲೆ ಬರುವ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿರಿಸಲು ಸಾಧ್ಯವಾಗದೇ ಇರುವ ಕಾರಣ ಹಾಲಿ ಈ ಶೇಕಡಾವಾರು ಅದಲುಬದಲು ಮಾಡಿ ಪಾಲಿಕೆಯ ಸಿಬ್ಬಂದಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿಯು ಹಾಗೂ ಎರವಲು ಸೇವೆಯ ಮೇಲಿನ ಸಿಬ್ಬಂದಿಗಳನ್ನು ಕಡಿಮೆ ಸಂಖ್ಯೆಯಲ್ಲಿ ನಿಯೋಜಿಸಿಕೊಳ್ಳಲು ಸಮಿತಿಗಳು ತೀರ್ಮಾನಿಸಿದ್ದು, ಇದರಿಂದಾಗಿ ಸಿಬ್ಬಂದಿಗಳ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುವುದೆಂದು ಜಂಟಿ ಸಮಿತಿಗಳು ಅಭಿಪ್ರಾಯಿಸಿ ನಿರ್ಣಯಿಸಿದೆ. ಇದೇ ರೀತಿ ಕಂದಾಯ ಇಲಾಖೆಯಲ್ಲಿ ಪ್ರಸ್ಥುತ ಮೌಲ್ಯ ಮಾಪಕರ 74 ಹುದ್ದೆ ಮಂಜೂರಾತಿಯಾಗಿದ್ದು, ಸಹಾಯಕ ಕಂದಾಯ ಅಧಿಕಾರಿ ಹುದ್ದೆಯನ್ನು ಮೌಲ್ಯಮಾಪಕರ, ವ್ಯವಸ್ಥಾಪಕರ ಹಾಗೂ ವರದಿಗಾರರ ಹುದ್ದೆಯಿಂದ 5:5:1 ರ ಅನುಪಾತದಲ್ಲಿ ತುಂಬ ಬೇಕಾಗಿದ್ದು ಹಾಲಿ ಇರುವ 74 ಮಂದಿ ಮೌಲ್ಯಮಾಪಕರ ಮಂಜೂರಾತಿ ಹುದ್ದೆ ಹಾಗೂ ವ್ಯವಸ್ಥಾಪಕರ 152 ಮಂಜೂರಾತಿ ಹುದ್ದೆಗಳಿದ್ದು ಮುಂದಿನ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಅನುಪಾತದ ಪ್ರಮಾಣವು ಸಮಾನಂತರ ಪ್ರಮಾಣದಲ್ಲಿ ಬಾರದೇ ಇರುವ ಕಾರಣ, ಹಾಲಿ ಈ ಇಲಾಖೆಯಲ್ಲಿರುವ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳು 132 ಇದ್ದು ಈ ಪೈಕಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗೆ ಸ್ಥಳಾಂತರಿಸಿ ಹಾಲಿ ಇರುವ 74 ಹುದ್ದೆಗಳನ್ನು 114 ಹುದ್ದೆಗಳಿಗೆ ಹೆಚ್ಚುವರಿ ಮಾಡಲಾಗಿದೆ. ಕಂದಾಯ ಇಲಾಖೆಯಲ್ಲಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಹಾಗೂ ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರು ಹುದ್ದೆಗಳ ಕಾರ್ಯವೈಖರಿ ಒಂದೇ ಆಗಿರುವುದರಿಂದ ಈ ಎರಡು ವೃಂದದ ಹುದ್ದೆಗಳನ್ನು ಒಗ್ಗೂಡಿಸಿ ಕಂದಾಯ ಪರಿವೀಕ್ಷಕರು ಎಂದು ನಾಮಾಂಕಿತಗೊಳಿಸಲಾಗಿದೆ. ಹಾಲಿ ಪೂಜ್ಯ ಮಹಾಪೌರರ ಹಾಗೂ ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳ ಹುದ್ದೆಯನ್ನು ಸಹಾಯಕ ಕಂದಾಯ ಅಧಿಕಾರಿ ವೃಂದದಿಂದ ತುಂಬಲು ಹಾಗೂ ಹಾಲಿ 12 ಸ್ಥಾಯಿ ಸಮಿತಿಗಳು ಅಸ್ಥಿತ್ವದಲ್ಲಿರುವುದರಿಂದ ಸಹಾಯಕ ಕಂದಾಯ ಅಧಿಕಾರಿ ವೃಂದದ ಒಬ್ಬ ಅಧಿಕಾರಿಯನ್ನು ವಿಶೇಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಹುದ್ದೆಯೊಂದನ್ನು ಸೃಜಿಸಿರುವುದರಿಂದ ಸಮಿತಿಗಳ ಕಾರ್ಯ ಕಲಾಪಗಳು ಸುಗಮವಾಗಿ ನಡೆಯಲು ಸಹಕಾರಿಯಾಗಿರುತ್ತದೆ. ಹಿಂದೆ 8 ವರದಿಗಾರರ ಹುದ್ದೆಗಳಿದ್ದು ಹಾಲಿ 4 ಹುದ್ದೆಗಳನ್ನು ಅಧಿಕವಾಗಿ ಸೃಜಿಸಿ ಒಟ್ಟು 12 ವರದಿಗಾರರ ಹುದ್ದೆಯಿಂದ ಕೌನ್ಸಿಲ್ ಕಾರ್ಯಕಲಾಪಗಳನ್ನು ನಿರ್ವಹಿಸಲು ಸುಗಮವಾಗಿರುತ್ತದೆ. ಕಾನೂನು ಇಲಾಖೆಯನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ 8 ವಲಯಗಳಿಗೆ ಸಂಬಂಧಿಸಿದಂತೆ 4 ಉಪ ಕಾನೂನು ಅಧಿಕಾರಿಗಳು (ತಲಾ 2 ವಲಯಗಳಿಗೆ ಒಬ್ಬರಂತೆ), 8 ಸಹಾಯಕ ಕಾನೂನು ಅಧಿಕಾರಿಗಳು ಹಾಗೂ 8 ಕಿರಿಯ ಕಾನೂನು ಅಧಿಕಾರಿಗಳನ್ನು (8 ವಲಯಗಳಿಗೆ ಕ್ರಮವಾಗಿ ತಲಾ ಒಬ್ಬರಂತೆ) ನೇಮಕ ಮಾಡಿ ಆಯಾ ವಲಯ ವ್ಯಾಪ್ತಿಯಲ್ಲಿಯೇ ಸುಗಮವಾಗಿ ಕಛೇರಿ ಕಾರ್ಯಗಳು ನೆರವೇರಲು ಕ್ರಮ ಜರುಗಿಸಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ.

.........................6

ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಹಲವಾರು ಹೊಸ ಹುದ್ದೆಗಳನ್ನು ಸೃಜಿಸುವುದು ಅತ್ಯವಶ್ಯಕವಾಗಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಆಯುಕ್ತರು ಮಂಡಿಸಿರುವ ದಿನಾಂಕ:11-07-2012ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಟಿಪ್ಪಣಿಯನ್ನು ಭಾಗಶಃ ಮಾರ್ಪಾಡಿನೊಂದಿಗೆ ಪಾಲಿಕೆಯ ಸಭೆಯ ಅನುಮೋದನೆ ಹಾಗೂ ಸರ್ಕಾರದ ಅನುಮೋದನೆಗೆ ಕೋರಲು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಜಂಟಿ ಸಭೆಗಳ ದಿನಾಂಕ: 09-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಜಂಟಿ ಸಭೆಯ ದಿನಾಂಕ:09-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ನಗರ ಪಾಲಿಕೆಯ ಹಲವಾರು ಸದಸ್ಯರಿಂದ ಸಿ ಅಂಡ್ ಆರ್‌ಗೆ ಸಂಬಂಧಿಸದಂತೆ ಹಲವು ಸಲಹೆ ಸೂಚನೆಗಳು ಬಂದಿರುವ ಹಿನ್ನಲೆಯಲ್ಲಿ, ಸದರಿ ಸಲಹೆಗಳನ್ನು ಪರಿಶೀಲಿಸಿ ಮಾನ್ಯ ಆಯುಕ್ತರವರು, ಪೂಜ್ಯ ಮಹಾಪೌರರು, ಉಪ ಮಹಾಪೌರರು. ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.ಎಸ್. ಪಕ್ಷದ ನಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅಧ್ಯಕ್ಷರವರು ಒಳಗೊಂಡು ಆಡಳಿತದ ಬಗ್ಗೆ ಅರಿವಿರುವ ತಜ್ಞರೊಂದಿಗೆ ಚರ್ಚಿಸಿ, ಅಗತ್ಯ ಬದಲಾವಣೆಗಳೊಂದಿಗೆ ಸರ್ಕಾರಕ್ಕೆ ತಿದ್ದುಪಡಿಗಾಗಿ ಕಳುಹಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಪಾಲಿಕೆಯ ಹಲವಾರು ಸದಸ್ಯರಿಂದ ಸಿ ಅಂಡ್ ಆರ್‌ಗೆ ಸಂಬಂಧಿಸದಂತೆ ಹಲವು ಸಲಹೆ ಸೂಚನೆಗಳು ಬಂದಿರುವ ಹಿನ್ನಲೆಯಲ್ಲಿ, ಸದರಿ ಸಲಹೆಗಳನ್ನು ಪರಿಶೀಲಿಸಿ ಮಾನ್ಯ ಆಯುಕ್ತರವರು, ಪೂಜ್ಯ ಮಹಾಪೌರರು, ಉಪ ಮಹಾಪೌರರು. ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.ಎಸ್. ಪಕ್ಷದ ನಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅಧ್ಯಕ್ಷರವರು ಒಳಗೊಂಡು ಆಡಳಿತದ ಬಗ್ಗೆ ಅರಿವಿರುವ ತಜ್ಞರೊಂದಿಗೆ ಚರ್ಚಿಸಿ, ಅಗತ್ಯ ಬದಲಾವಣೆಗಳೊಂದಿಗೆ ಸರ್ಕಾರಕ್ಕೆ ತಿದ್ದುಪಡಿಗಾಗಿ ಕಳುಹಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (392) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ. ಆಶಾ ಸುರೇಶ್, ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ:25-02-2012 ರಂದು ಅಧ್ಯಕ್ಷರು-ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು, ಸದರಿ ಪತ್ರದಲ್ಲಿ ಬೆಂಗಳೂರು ನಗರದ ನಿರ್ಮಾತರಾದ ಶ್ರೀಯುತ. ಕೆಂಪೇಗೌಡರು ಬೆಂಗಳೂರು ನಗರದಲ್ಲಿ ನಿರ್ಮಿಸಿದ ಕೋಟೆಯ ಬಾಗಿಲು ಪದೇ ಪದೇ ಬೀಳುತ್ತಿದ್ದು, ಇದರ ಉಳಿವಿಗಾಗಿ ಗರ್ಭಿಣಿ ಹೆಣ್ಣಿನ ಬಲಿಯನ್ನು ನೀಡಬೇಕೆಂದು ಜ್ಯೋತಿಷಿಗಳ ನುಡಿಯನ್ನು ಸ್ವತಃ ಕೆಂಪೇಗೌಡರು ಒಪ್ಪದೇ ಇದ್ದರೂ ಸಹ ಕೆಂಪೇಗೌಡ ಸೊಸೆಯಾದ ಶ್ರೀಮತಿ. ಲಕ್ಷ್ಮೀದೇವಿಯವರು ಸ್ವಪ್ರೇರಣೆಯಿಂದ ಮಾವನವರ ಹಾಗೂ ಜನರ ಶ್ರಮವು ವ್ಯರ್ಥವಾಗಕೂಡದೆಂದು ತನ್ನ ಪ್ರಾಣವನ್ನೇ ಕೋಟೆಯ ಬಾಗಿಲಿಗೆ ಅರ್ಪಿಸಿದ್ದು, ಇವರ ತ್ಯಾಗ, ಬಲಿದಾನದ ಸಂಕೇತವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆವರಣದಲ್ಲಿ ಅವರ ಪುತ್ಥಳಿಯನ್ನು ಸ್ಥಾಪಿಸುವಂತೆ ನಿರ್ಣಯ ಕೈಗೊಳ್ಳುವಂತೆ ಕೋರಿರುತ್ತಾರೆ.

ಈ ಮನವಿಯನ್ವಯ ಈ ವಿಷಯವನ್ನು ಪರಿಗಣಿಸಿದ ದಿನಾಂಕ:27-02-2012 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ:ತೆ.ಆ.ಸ್ಥಾ.ಸ/482/11-12 ಹಾಗೂ ದಿನಾಂಕ:28-03-2012 ರಂದು ಪಾಲಿಕೆಯ ಸಭೆಯ ವಿಷಯ ಸಂಖ್ಯೆ:06/359-2011-12 ರಲ್ಲಿ ಶ್ರೀಮತಿ. ಲಕ್ಷ್ಮೀದೇವಿಯವರ ಪುತ್ಥಳಿಯನ್ನು ಪಾಲಿಕೆಯ ಆವರಣದಲ್ಲಿ ಪ್ರತಿಷ್ಠಾಪಿಸುವಂತೆ ನಿರ್ಣಯ ಕೈಗೊಳ್ಳಲಾಗಿದ್ದು, ಸದರಿ ನಿರ್ಣಯದ ಪ್ರತಿಗಳನ್ನು ಲಗತ್ತಿಸಿ ಶ್ರೀಮತಿ. ಲಕ್ಷ್ಮೀದೇವಿಯವರ ಪುತ್ಥಳಿಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಅನುಮೋದನೆ ಕೋರಲಾಗಿದ್ದು, ಸರ್ಕಾರವು ಸಂಖ್ಯೆ: ನಅಇ/ 368/ಎಂಎನ್‌ಜಿ/2012, ದಿನಾಂಕ:12-12-2012 ರಂದು ಆದೇಶ ಹೊರಡಿಸಿ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯ ಸುತ್ತೋಲೆ ಸಂಖ್ಯೆ:ಕಸಂವಾಪ್ರ/564/ಕಸದ/2012, ದಿನಾಂಕ:11-06-2012ರ ಮಾರ್ಗಸೂಚಿಗಳ ಪ್ರಕಾರ ಸರ್ಕಾರದ/ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂದಿಸಿದೆ. ಆದಕಾರಣ, ಪ್ರತಿಮೆಗಳ ನಿರ್ಮಾಣಕ್ಕೆ ನಿಯಮಗಳಲ್ಲಿ ಅವಕಾಶವಿಲ್ಲವೆಂದು ನಿರ್ದೇಶಿಸಿರುವುದರಿಂದ, ಸರ್ಕಾರದ ಆದೇಶವನ್ನು ಪಾಲಿಕೆ ಸಭೆಯಲ್ಲಿ ದಾಖಲಿಸಿಕೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ;28-01-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆವರಣದಲ್ಲಿ ಪುತ್ಥಳಿಯನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ ಸರ್ಕಾರದ ಮರುಪರಿಶೀಲನೆಗೆ ಕಳುಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆವರಣದಲ್ಲಿ ಪುತ್ಥಳಿಯನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ ಸರ್ಕಾರದ ಮರುಪರಿಶೀಲನೆಗೆ ಕಳುಹಿಸುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (353) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ರವರು ಸಂಖ್ಯೆ:ಕರಾಸಾ.ಕೇಕ:ಕಾಇ:883/11-12, ದಿನಾಂಕ:16-08-2011 ರಂತೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು, ಜಕ್ಕರಾಯನಕೆರೆ ಆವರಣದಲ್ಲಿರುವ ಮಹಾನಗರ ಪಾಲಿಕೆಗೆ ಸೇರಿದ 4 ಎಕರೆ ಪ್ರದೇಶವನ್ನು ಹಾಗೂ ಕೃಷ್ಣಫ್ಲೋರ್ ಮಿಲ್‌ಗೆ ಸೇರಿದ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ತಾತ್ಕಾಲಿಕವಾಗಿ ಒದಗಿಸುವಂತೆ ಕೋರಿರುತ್ತಾರೆ. ಈಗ ಕೆಂಪೇಗೌಡ ಬಸ್ ನಿಲ್ದಾಣದ ಪ್ರದೇಶದಲ್ಲಿ ಮೆಟ್ರೋ ಕಾಮಗಾರಿಗಳು ನಡೆಯುತ್ತಿದ್ದು, ಈ ಪ್ರದೇಶದಲ್ಲಿರುವ 4 ಬಸ್ ಘಟಕಗಳ ಮತ್ತು ಭಾಗಶ: ಬಸ್ ನಿಲ್ದಾಣವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವುದು ಅನಿವಾರ್ಯವಾಗಿರುವುದು. ಆದುದರಿಂದ, ಪ್ರಸ್ತಾಪಿತ ಪ್ರದೇಶವನ್ನು ತಮ್ಮ ಸಂಸ್ಥೆಗೆ ಸದ್ಯಕ್ಕೆ ನೀಡುವಂತೆ ಕೋರಿರುತ್ತಾರೆ. ಸನ್ಮಾನ್ಯ ಗೃಹ ಮತ್ತು ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 11-06-2011 ರಂದು ನಡೆದ ಸಭೆಯಲ್ಲಿ ಈ ಸಂಬಂಧ ನಡವಳಿಯಾಗಿದ್ದು, ಇದರಂತೆ ಪ್ರಸ್ತುತ ಪ್ರದೇಶವನ್ನು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸಂಸ್ಥೆಗೆ ನೀಡಬೇಕೆಂದು ವ್ಯವಸ್ಥಾಪಕ ನಿರ್ದೇಶಕರು ಕೋರಿರುತ್ತಾರೆ.

ಈ ವಿಷಯದಲ್ಲಿ ಪ್ರಸ್ತುತ ಪ್ರದೇಶದಲ್ಲಿನ ಸ್ಥಳೀಯರೊಂದಿಗೆ ಸಮಾಲೋಚಿಸಿ ಅಭಿಪ್ರಾಯ ನೀಡುವಂತೆ ಅಪರ ಆಯುಕ್ತರು (ಪಶ್ಚಿಮ) ವಲಯ ರವರನ್ನು ಕೋರಲಾಗಿತ್ತು. ಸದರಿ ಪ್ರದೇಶದ ನಿವಾಸಿಗಳು ರಸ್ತೆ ಸಾರಿಗೆ ಸಂಸ್ಥೆಗೆ ಪ್ರಸ್ತುತ ಜಾಗವನ್ನು ನೀಡುವ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದು, ಈ ಬಗ್ಗೆ ಸ್ಥಳೀಯ ಮಹಜರ್ ನಡೆಸಿ ಅಪರ ಆಯುಕ್ತರು (ಪಶ್ಚಿಮ) ವಲಯ ರವರು ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಜಕ್ಕರಾಯನಕೆರೆ ಆವರಣದಲ್ಲಿರುವ 4 ಎಕರೆ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ತಾತ್ಕಾಲಿಕವಾಗಿ ಬಸ್ ನಿಲ್ದಾಣಕ್ಕಾಗಿ ನೀಡುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಜಕ್ಕರಾಯನಕೆರೆ ಆವರಣದಲ್ಲಿರುವ 4 ಎಕರೆ ಜಮೀನಿನಲ್ಲಿ ಕೆ.ಎಸ್.ಆರ್.ಟಿ.ಸಿ/ ಬಿ.ಎಂ.ಟಿ.ಸಿ ಸಂಸ್ಥೆಗೆ ತಾತ್ಕಾಲಿಕ ಬಸ್ ನಿಲ್ದಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಯಾವುದೇ ಕಾರಣಕ್ಕೂ ವಾಣಿಜ್ಯ ಉಪಯೋಗಕ್ಕೆ ಉಪಯೋಗಿಸದಂತೆ ಷರತ್ತು ವಿಧಿಸಿ ಗುತ್ತಿಗೆಗೆ ನೀಡುವ ಮಾರ್ಪಾಡಿನೊಂದಿಗೆ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-12-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (393) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-119, ಸಿದ್ದಯ್ಯ ರಸ್ತೆಯಲ್ಲಿರುವ 30+20/2x40=1000 ಅಡಿಗಳ ಪಾಲಿಕೆ ಸ್ವತ್ತನ್ನು ಶ್ರೀಮತಿ. ವಿನ್‌ಫ್ರೆಡ್ ಜೋಸೆಫ್ ರವರಿಗೆ ದಿನಾಂಕ:07-02-1977 ರಿಂದ 30 ವರ್ಷಗಳ ಅವಧಿಗೆ ವಾಣಿಜ್ಯ ಉದ್ದೇಶಕ್ಕೆ ವಾರ್ಷಿಕ ರೂ.50/- ನಿಗಧಿಪಡಿಸಿ, ಗುತ್ತಿಗೆಗೆ ನೀಡಿದ್ದು, ದಿನಾಂಕ:06-02-2007ಕ್ಕೆ ಅವಧಿ ಮುಗಿದಿರುತ್ತದೆ.

ಶ್ರೀ ಸೈಯದ್ ಇಸ್ಮಾಯಿಲ್‌ರವರು ಅರ್ಜಿ ಸಲ್ಲಿಸಿ, ಈ ಗುತ್ತಿಗೆದಾರರ ಜೊತೆ ಪಾಲುದಾರರಾಗಿ ವ್ಯಾಪಾರ ಮಾಡುತ್ತಿದ್ದು, ಶ್ರೀಮತಿ ವಿನ್‌ಫ್ರೆಡ್ ಜೋಸೆಫ್ ರವರು ಮರಣ ಹೊಂದಿರುವುದರಿಂದ, ಈ ಜಾಗದ ಪೂರ್ಣ ಉಸ್ತುವಾರಿ ತಾವೇ ನೋಡಿಕೊಳ್ಳುತ್ತಿದ್ದು, ಈ ಜಾಗವನ್ನು ಇಂದಿನ ಮಾರುಕಟ್ಟೆ ಬೆಲೆಗೆ ತನ್ನ ಹೆಸರಿಗೆ ಕ್ರಯಕ್ಕೆ ಅಥವಾ ಗುತ್ತಿಗೆಗೆ ನೀಡಲು ಕೋರಿರುತ್ತಾರೆ. ಈ ಬಗ್ಗೆ ಪಾಲಿಕೆ ಸದಸ್ಯರು ಶ್ರೀ ಸೈಯದ್ ಇಸ್ಮಾಯಿಲ್‌ರವರಿಗೆ ಕ್ರಯಕ್ಕೆ ಅಥವಾ ಗುತ್ತಿಗೆಗೆ ನೀಡಲು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ವರದಿಯಲ್ಲಿ ಮೂಲ ಹಂಚಿಕೆದಾರರು ಸ್ವತ್ತಿನಲ್ಲಿ ನಿರ್ಮಿಸಿರುವ ಕಟ್ಟಡ ಉಪಯೋಗಿಸದೇ ಶ್ರೀ ಸೈಯದ್ ಇಸ್ಮಾಯಿಲ್ ಎಂಬುವವರಿಗೆ ಬಾಡಿಗೆಗೆ ನೀಡಿರುವುದು ಕಂಡು ಬಂದಿದ್ದು, ಅಲ್ಲದೇ ಬಾಡಿಗೆದಾರರು/ಹಂಚಿಕೆದಾರರು ಮರಣ ಹೊಂದಿರುತ್ತಾರೆಂದು ಹಾಗೂ ಉಪ ಗುತ್ತಿಗೆ ನೀಡಿ ಷರತ್ತು ಉಲ್ಲಂಘಿಸಿರುತ್ತಾರೆಂದು ವರದಿ ಮಾಡಿರುತ್ತಾರೆ. ಆದುದರಿಂದ, ಶ್ರೀಮತಿ. ವಿನ್‌ಫ್ರೆಡ್ ಜೋಸೆಫ್ ರವರಿಗೆ ನೀಡಿರುವ ಗುತ್ತಿಗೆ ರದ್ದುಪಡಿಸಿ ಪಾಲಿಕೆ ಸದಸ್ಯರು ಕೋರಿರುವಂತೆ, ಶ್ರೀ. ಸೈಯದ್ ಇಸ್ಮಾಯಿಲ್ ರವರಿಗೆ ಗುತ್ತಿಗೆ ನೀಡುವ ಬಗ್ಗೆ ಸಂಬಂಧಿಸಿದ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಸೂಕ್ತ ನಿರ್ಣಯಕ್ಕಾಗಿ ಟಿಪ್ಪಣಿ ಮಂಡಿಸಲಾಗಿತ್ತು. ಈ ಬಗ್ಗೆ ದಿನಾಂಕ:20-12-2011 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:162/2011-12 ರಲ್ಲಿನ ನಡವಳಿಯಲ್ಲಿ ಶ್ರೀ ಸೈಯದ್ ಇಸ್ಮಾಯಿಲ್ ರವರು ಗುತ್ತಿಗೆದಾರರ ಪಾಲುದಾರರಾಗಿದ್ದು, ಗುತ್ತಿಗೆದಾರರು ಮರಣ ಹೊಂದಿರುವುದರಿಂದ ಈಗ ಸದರಿ ಸ್ವತ್ತನ್ನು ಇವರಿಗೆ ಗುತ್ತಿಗೆಗೆ ನೀಡಬಹುದೇ? ಎನ್ನುವ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಪಡೆದು ಕಡತವನ್ನು ಮರು ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಈ ಬಗ್ಗೆ ಕಾನೂನು ಕೋಶದ ಅಧಿಕಾರಿಗಳು ಮೂಲ ಗುತ್ತಿಗೆದಾರರು ನಿಧನರಾಗಿರುವ ಹಿನ್ನಲೆಯಲ್ಲಿ ಮತ್ತು ನಿವೇಶನದ ಗುತ್ತಿಗೆ ಅವಧಿಯು ಸಹ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ನಿವೇಶನವನ್ನು ಪಾಲಿಕೆ ಸುಪರ್ದಿಗೆ ತೆಗೆದುಕೊಂಡು ತದನಂತರದಲ್ಲಿ ಮನವಿದಾರರು ಕೋರಿರುವಂತೆ ನಿವೇಶನವನ್ನು ಕ್ರಯಕ್ಕಾಗಲಿ ಅಥವಾ ಗುತ್ತಿಗೆ ಆಧಾರದಲ್ಲಿಯಾಗಲಿ ನೀಡುವ ವಿಷಯದಲ್ಲಿ ಸರ್ಕಾರದ ಆದೇಶಗಳಂತೆ ನಿಯಮಾನುಸಾರ ಮನವಿಯನ್ನು ಪರಿಗಣಿಸುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿಎಂಡಿ/2002, ದಿನಾಂಕ:02-06-2003 ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಕ್ರಯಕ್ಕೆ ಅಥವಾ ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಪ್ರಕರಣಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

.........2

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.6,300/- ಗಳಿದ್ದು, ಅರ್ಜಿದಾರರು ಕೋರಿರುವ 30+20/2x40 ಅಡಿಗಳ ಜಾಗವು 1000 ಚ.ಅಡಿಗಳಾಗುತ್ತದೆ. ಇದರಂತೆ, 6,300x1000=ರೂ. 63,00,000/- ಗಳಾಗುತ್ತದೆ. ಕ್ರಯಕ್ಕೆ ನೀಡುವುದಾದಲ್ಲಿ ಶೇ.20% ರಷ್ಟು ಹೆಚ್ಚಿಸಬೇಕಾಗಿರುತ್ತದೆ ಹಾಗೂ ಗುತ್ತಿಗೆಗೆ ನೀಡುವುದಾದಲ್ಲಿ ಶೇ.10% ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.6,30,000/- ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.52,500/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆದುಕೊಂಡು ಬಹಿರಂಗ ಹರಾಜಿನ ಮೂಲಕ ಗುತ್ತಿಗೆಗೆ ಅಥವಾ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-12-2012ರ ಟಿಪ್ಪಣಿ ಹಾಗೂ ಸದರಿ ಸ್ವತ್ತನ್ನು ಪಾಲಿಕೆಯ ವಶಕ್ಕೆ ಪಡೆದುಕೊಂಡು ಬಹಿರಂಗ ಹರಾಜಿನ ಮೂಲಕ ಗುತ್ತಿಗೆಗೆ ಅಥವಾ ಕ್ರಯಕ್ಕೆ ನೀಡುವ ಮಾನ್ಯ ಆಯುಕ್ತರ ದಿನಾಂಕ:04-12-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-01-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:02-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (395) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಯು.ಡಿ.ಸೋಮಯ್ಯ ರವರು ಸ್ವತ್ತಿನ ಸಂಖ್ಯೆ: 17, 1ನೇ ಮುಖ್ಯ ರಸ್ತೆ, ಸುಭೇದಾರ್‌ಪಾಳ್ಯ, ವಾರ್ಡ್-45, ಇವರ ನಿವೇಶನದ ಮುಂಭಾಗದಲ್ಲಿರುವ ನಗರ ಪಾಲಿಕೆಯ ಸ್ವತ್ತನ್ನು ಒತ್ತುವರಿ ಮಾಡಿರುತ್ತಾರೆಂದು ಶ್ರೀಮತಿ.ಕಲಾವತಿ ಎಂಬುವವರು ವಲಯಾಧಿಕಾರಿಗಳಿಗೆ ಹಾಗೂ ಲೋಕಾಯುಕ್ತರವರಿಗೆ ದೂರನ್ನು ನೀಡಿದ್ದು, ಈ ಬಗ್ಗೆ ಪಾಲಿಕೆಯ ವತಿಯಿಂದ ನಕ್ಷೆ ಹಾಗೂ ವರದಿಯನ್ನು ಮಾನ್ಯ ಲೋಕಾಯುಕ್ತರವರಿಗೆ ಈ ಹಿಂದೆ ಸಲ್ಲಿಸಲಾಗಿರುತ್ತದೆ.

ಶ್ರೀ.ಯು.ಡಿ.ಸೋಮಯ್ಯ ರವರು ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:08-07-2011 ರಂದು ಪತ್ರ ಬರೆದಿದ್ದು, ಸದರಿ ಪತ್ರದಲ್ಲಿ ಒತ್ತುವರಿಯಾಗಿರುವ ವಿಸ್ತೀರ್ಣಕ್ಕೆ ನಿಯಮಾನುಸಾರ ತಗಲುವ ವೆಚ್ಚವನ್ನು ನಿಗಧಿಪಡಿಸಿ ಸಕ್ರಮಗೊಳಿಸುವಂತೆ ಕೋರಿದ್ದು, ಮಾನ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ ರವರು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಪತ್ರ ಬರೆದಿರುತ್ತಾರೆ.

ಪ್ರಸ್ತುತ ಜಾಗವನ್ನು ವಲಯಾಧಿಕಾರಿಗಳು ಸ್ಥಳ ತನಿಖೆ ಮಾಡಿದ್ದು, ಸದರಿ ಒತ್ತುವರಿಯಾಗಿರುವ ಜಾಗವು ನಗರ ಪಾಲಿಕೆಗೆ ಯಾವುದೇ ತರಹದ ಉಪಯೋಗಕ್ಕೆ ಬಾರದೇ ಇರುವುದು ಕಂಡು ಬಂದಿರುತ್ತದೆ. ಆದುದರಿಂದ, ಸದರಿ 84.52 ಚದರಡಿ ಜಾಗವನ್ನು ಕೌನ್ಸಿಲ್ ಸಭೆಯ ನಿರ್ಣಯ ಪಡೆದು, ಸರ್ಕಾರದ ಅನುಮೋದನೆಯೊಂದಿಗೆ ಸ್ವತ್ತಿನ ಮಾಲೀಕರ ಹೆಸರಿಗೆ ಈಗಿನ ಮಾರುಕಟ್ಟೆ ದರದಲ್ಲಿ ನೀಡಬಹುದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಒತ್ತುವರಿ ಜಾಗವನ್ನು ಸಹಾಯಕ ಆಯುಕ್ತರು (ಆಸ್ತಿಗಳು) ಮತ್ತು ಭೂಮಾಪಕರು ಸ್ಥಳ ಪರಿಶೀಲಿಸಿ ಸದರಿ ಸ್ವತ್ತಿನ ಒಟ್ಟು ವಿಸ್ತೀರ್ಣ 263.67 ಚದರಡಿಗಳಿರುವುದನ್ನು ವರದಿ ಮಾಡಿರುತ್ತಾರೆ. ಸ್ಪಷ್ಟವಾಗಿ ಒತ್ತುವರಿ ಆಗಿರುವ ಪ್ರದೇಶ ಭೂಮಾಪಕರು ಮಾಡಿರುವ ಅಳತೆಗನುಗುಣವಾಗಿ 263.67 ಚದರಡಿ ಇರುವುದನ್ನು ಸ್ಪಷ್ಟಪಡಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿವಿಸಿ-19/2010-11, ದಿನಾಂಕ:21-09-2011 ರಂತೆ ಸ್ಥಿರಾಸ್ತಿಗಳ ಮತ್ತು ಕಟ್ಟಡದ ಅಂದಾಜು ಮಾರುಕಟ್ಟೆ ದರದಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ.2,500/- ಇದ್ದು, ಇದಕ್ಕೆ ಶೇ.30% ರಷ್ಟು ಹೆಚ್ಚಿಸಿದಾಗ ಒಟ್ಟು ಮೊತ್ತ ಚದರ ಅಡಿ 1ಕ್ಕೆ ರೂ.2,500+750=3,250/- ಆಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯ 263.67 ಚದರ ಅಡಿ ರೂ.8,56,927/- ಆಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ.ಯು.ಡಿ.ಸೋಮಯ್ಯ ರವರಿಗೆ ಕ್ರಯಕ್ಕೆ ನೀಡುವ ಜಾಗದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-08-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-01-2013ರ ನಿರ್ಣಯ ಹಾಗೂ ಅರ್ಜಿದಾರರ ಸ್ವತ್ತಿನ ಮೂಲ ದಾಖಲೆಗಳನ್ನು ಪರಿಶೀಲಿಸಿ, ಸಿ.ಟಿ.ಎಸ್. ನಂ.2770 ರಲ್ಲಿನ ಜಾಗದ ವಿಸ್ತೀರ್ಣದ ಬಗ್ಗೆ, ನಗರ ಭೂಮಾಪನ ಇಲಾಖೆಯ ದಾಖಲೆಗಳ ಪ್ರಕಾರ ಇರುವ ನಿಖರವಾದ ಅಳತೆಯಂತೆ ಭೂಮಾಪಕರಿಂದ ಸರ್ವೆ ಮಾಡಿಸಿ, ಸಿ.ಟಿ.ಎಸ್. ನಂ.2770 ರಲ್ಲಿನ ಪ್ರದೇಶದಲ್ಲಿ ಅತಿಕ್ರಮಿಸಿಕೊಂಡಿರುವ ಪ್ರದೇಶವನ್ನು ಪಾಲಿಕೆಯ ವಶಕ್ಕೆ ಪಡೆದು ಪಾಲಿಕೆಯ ಉಪಯೋಗಕ್ಕೆ ಬಾರದಿದ್ದಲ್ಲಿ ಹರಾಜು ಮೂಲಕ ವಿತರಿಸಲು ಕ್ರಮಕೈಗೊಳ್ಳುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (397) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಜಿ.ಹೆಚ್.ರಾಮಚಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ನಂ.160- ರಾಜರಾಜೇಶ್ವರಿನಗರ ರವರ ಪತ್ರದಲ್ಲಿ 2012-13ನೇ ಸಾಲಿನ ಆಯವ್ಯಯದಲ್ಲಿ ನಾಡಪ್ರಭು ಕೆಂಪೇಗೌಡ ರವರ ಪ್ರತಿಮೆಯನ್ನು ಬಿ.ಇ.ಎಂ.ಎಲ್ ಬಡಾವಣೆಯ ವೃತ್ತದಲ್ಲಿ ಸ್ಥಾಪಿಸಲು ಪ್ರಸ್ತಾವನೆಯನ್ನು ಕೋರಿರುತ್ತಾರೆ.

ಅದರಂತೆ ಪ್ರಸ್ತಾಪಿತ ಸ್ಥಳದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:04-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಕೆಂಪೇಗೌಡರ ಪ್ರತಿಮೆಯ ಬದಲಾಗಿ ಬಿ.ಇ.ಎಂ.ಎಲ್ ಬಡಾವಣೆಯ ವೃತ್ತ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳಿಗೆ ಅಭಿವೃದ್ಧಿಪಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಕೆಂಪೇಗೌಡರ ಪ್ರತಿಮೆಯ ಬದಲಾಗಿ ಬಿ.ಇ.ಎಂ.ಎಲ್ ಬಡಾವಣೆಯ ವೃತ್ತ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳಿಗೆ ಅಭಿವೃದ್ಧಿಪಡಿಸುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (399) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ದಿನಾಂಕ:01-02-2011 ರಂದು ನಡೆದು ಪಾಲಿಕೆ ಸಭೆಯ ವಿಷಯ ಸಂಖ್ಯೆ:13(208)/10-11 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯರಸ್ತೆ, ಡಿ.ವಿ.ಜಿ. ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್. ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ದಿನಾಂಕ:18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು, ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | 25,50,000/- | H1 |
| 2 | ಮೆ॥ ಪ್ರಕಾಶ್ ಆರ್ಟ್ಸ್ | 12,60,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.25,50,000/- ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/- ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ. ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು, ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್ ಅನ್ನು ಅನುಮೋದಿಸುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:08-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (400) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ದಿನಾಂಕ:01-02-2011 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ:13(208)/10-11 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯರಸ್ತೆ, ಡಿ.ವಿ.ಜಿ. ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್. ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ:18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು, ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ಪ್ರಕಾಶ್ ಆರ್ಟ್ಸ್ | ರೂ.10,80,000/- | H1 |
| 2 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | ರೂ.5,89,000/- | H2 |

.......................2

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ಪ್ರಕಾಶ್ ಆರ್ಟ್ಸ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.10,80,000/- ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/- ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ. ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು, ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್‌ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ಪ್ರಕಾಶ್ ಆರ್ಟ್ಸ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕುನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೆ॥ ಪ್ರಕಾಶ್ ಆರ್ಟ್ಸ್ ರವರ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:08-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-06-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 23-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (401) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ದಿನಾಂಕ:01-02-2011 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ:13(208)/10-11ರಲ್ಲಿ ತೀರ್ಮಾನಿಸಲಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯರಸ್ತೆ, ಡಿ.ವಿ.ಜಿ. ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್. ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ದಿನಾಂಕ:18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಂಬೆಸ್ಸಿ ಗಾಲ್ಫ್ ಲಿಂಕ್, ದೊಮ್ಮಲೂರು ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು, ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ;

..................2

| ಕ್ರ ಸಂ. | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ಪ್ರಕಾಶ್ ಆರ್ಟ್ಸ್ | ರೂ.10,80,000/- | H1 |
| 2 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | ರೂ.5,69,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ಪ್ರಕಾಶ್ ಆರ್ಟ್ಸ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.10,80,000/- ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/- ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ. ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು, ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್‌ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ಪ್ರಕಾಶ್ ಆರ್ಟ್ಸ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಎಂಬೆಸ್ಸಿ ಗಾಲ್ಫ್ ಲಿಂಕ್, ದೊಮ್ಮಲೂರು ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೆ॥ ಪ್ರಕಾಶ್ ಆರ್ಟ್ಸ್ ರವರ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 08-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 23-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (346) / 2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಡಾ॥ ಅಶ್ವತ್ಥ್ ನಾರಾಯಣ್.ಸಿ.ಎನ್. ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಸದಸ್ಯರು ದಿನಾಂಕ:18-01-2012 ರಂದು ಮನವಿ ಪತ್ರ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:66ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್‌ನಲ್ಲಿರುವ ಉದ್ಯಾನವನಕ್ಕೆ "ಶ್ರೀ ಸಂಗೊಳ್ಳಿರಾಯಣ್ಣ ಉದ್ಯಾನವನ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಸದರಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಹಾಗೂ ಕಲಂ 7 ರಲ್ಲಿ ಸಾಮಾನ್ಯವಾಗಿ ಒಂದು ನಗರ ಪಾಲಿಕೆಯ ಪ್ರದೇಶದೊಳಗಿನ ಯಾವುದೇ ಎರಡು ಬೀದಿಗಳು, ವೃತ್ತಗಳು, ಚೌಕಗಳು, ಪಾರ್ಕ್‌ಗಳು, ಉದ್ಯಾನವನಗಳು, ಯಾವುದೇ ಇತರ ಸಾರ್ವಜನಿಕ ಸ್ಥಳಗಳು ಒಂದೇ ರೀತಿಯ ಹೆಸರನ್ನು ಹೊಂದಿರತಕ್ಕದ್ದಲ್ಲ ಎಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಬೆಂಗಳೂರು ನಗರ ರೈಲ್ವೆ ನಿಲ್ದಾಣಕ್ಕೆ ಶ್ರೀ ಸಂಗೊಳ್ಳಿರಾಯಣ್ಣ ರೈಲ್ವೆ ನಿಲ್ದಾಣ ಎಂದು ನಾಮಕರಣ ಮಾಡಲಾಗಿದೆ. ಪ್ರಸ್ತುತ ವಾರ್ಡ್ ಸಂಖ್ಯೆ: 66 ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್‌ನಲ್ಲಿರುವ ಉದ್ಯಾನವನಕ್ಕೆ "ಶ್ರೀ ಸಂಗೊಳ್ಳಿರಾಯಣ್ಣ ಉದ್ಯಾನವನ" ಎಂದು ನಾಮಕರಣ ಮಾಡಲು ಅವಕಾಶ ಇರುವುದಿಲ್ಲ ಎಂಬ ಅಂಶವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಈ ಸಂಬಂಧ ದಿನಾಂಕ:12-04-2012 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ: 242/2011-12 ರಲ್ಲಿ ಮಾನ್ಯ ಆಯುಕ್ತರ ಟಿಪ್ಪಣಿ ಪರಿಷ್ಕರಿಸಿ ಸದರಿ ಉದ್ಯಾನವನಕ್ಕೆ "ಶ್ರೀ. ಸಂಗೊಳ್ಳಿರಾಯಣ್ಣ ಉದ್ಯಾನವನ" ಎಂದು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ ಹಾಗೂ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:137(132)/2012-13 ರಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯವನ್ನು ಒಪ್ಪುವುದೆಂದು ನಿರ್ಣಯಿಸಿದ್ದು, ಸದರಿ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣ, 7ನೇ ನಿಯಮಕ್ಕೆ ವಿರುದ್ಧವಾಗಿರುವುದರಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, ಪ್ರಕರಣ 98ರ ಮೇರೆಗೆ ಸದರಿ ನಿರ್ಣಯವನ್ನು ರದ್ದುಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರದ ಪತ್ರದ ಸಂಖ್ಯೆ:ನಅಇ 329 ಎಂಎನ್‌ಜಿ 2012 ದಿನಾಂಕ:30-10-2012 ರಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 66ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್‌ನಲ್ಲಿರುವ ಉದ್ಯಾನವನಕ್ಕೆ "ಶ್ರೀ ಸಂಗೊಳ್ಳಿರಾಯಣ್ಣ ಉದ್ಯಾನವನ" ಎಂದು ನಾಮಕರಣ ಮಾಡಲು ಪಾಲಿಕೆಯ ದಿನಾಂಕ:29-05-2012ರ ವಿಷಯದ ಸಂಖ್ಯೆ: 137(132)2012-13 ರಲ್ಲಿ ಕೈಗೊಂಡಿರುವ ನಿರ್ಣಯದ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿರುತ್ತಾರೆ.

.......................2

ಆದುದರಿಂದ ದಿನಾಂಕ:30-10-2012ರ ಸರ್ಕಾರದ ಆದೇಶವನ್ನು ದಾಖಲಾತಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-01-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸರ್ಕಾರದ ಆದೇಶವನ್ನು ದಾಖಲಿಸಿಕೊಳ್ಳಲಾಗಿದೆ ಹಾಗೂ ನಗರದ ಹಲವು ಕಡೆಗಳಲ್ಲಿ ಉದ್ಯಾನವನ, ಕ್ರೀಡಾಂಗಣ, ವೃತ್ತ, ರಸ್ತೆಗಳಿಗೆ ಒಂದೇ ಹೆಸರನ್ನು ನಾಮಕರಣ ಮಾಡಿರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ನಾಮಕರಣದ ಬಗ್ಗೆ ಸರ್ಕಾರವನ್ನು ಮತ್ತೊಮ್ಮೆ ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸರ್ಕಾರದ ಆದೇಶವನ್ನು ದಾಖಲಿಸಿಕೊಳ್ಳಲಾಗಿದೆ ಹಾಗೂ ನಗರದ ಹಲವು ಕಡೆಗಳಲ್ಲಿ ಉದ್ಯಾನವನ, ಕ್ರೀಡಾಂಗಣ, ವೃತ್ತ, ರಸ್ತೆಗಳಿಗೆ ಒಂದೇ ಹೆಸರನ್ನು ನಾಮಕರಣ ಮಾಡಿರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ನಾಮಕರಣದ ಬಗ್ಗೆ ಸರ್ಕಾರವನ್ನು ಮತ್ತೊಮ್ಮೆ ಕೋರುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (363) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ॥ ಅಶ್ವಥ್‌ನಾರಾಯಣ್.ಸಿ.ಎನ್. ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಸದಸ್ಯರು ದಿನಾಂಕ:18-01-2012 ರಂದು ಮನವಿ ಪತ್ರ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:66ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್, ಮಿಲ್ಕ್ ಕಾಲೋನಿಯಲ್ಲಿರುವ ಆಟದ ಮೈದಾನಕ್ಕೆ "ಶ್ರೀ ನಾಡಪ್ರಭು ಕೆಂಪೇಗೌಡ ಕ್ರೀಡಾಂಗಣ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಪರಿಶೀಲಿಸಲಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, 293ನೇ ಪ್ರಕರಣದ (1)ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಹಾಗೂ ಕಲಂ 7ರಲ್ಲಿ ಸಾಮಾನ್ಯವಾಗಿ ಒಂದು ನಗರ ಪಾಲಿಕೆಯ ಪ್ರದೇಶದೊಳಗಿನ ಯಾವುದೇ ಎರಡು ಬೀದಿಗಳು, ವೃತ್ತಗಳು, ಚೌಕಗಳು, ಪಾರ್ಕ್‌ಗಳು, ಉದ್ಯಾನವನಗಳು, ಯಾವುದೇ ಇತರ ಸಾರ್ವಜನಿಕ ಸ್ಥಳಗಳು ಒಂದೇ ರೀತಿಯ ಹೆಸರನ್ನು ಹೊಂದಿರತಕ್ಕದ್ದಲ್ಲ ಎಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಬೆಂಗಳೂರು ನಗರ ಮಧ್ಯಭಾಗದಲ್ಲಿರುವ ಪ್ರತಿಷ್ಠಿತ ರಸ್ತೆಗೆ ಶ್ರೀ. ಕೆಂಪೇಗೌಡ ರಸ್ತೆ ಎಂದು ಹಾಗೂ ಬೆಂಗಳೂರು ನಗರ ಬಸ್ ನಿಲ್ದಾಣಕ್ಕೆ ಶ್ರೀ. ಕೆಂಪೇಗೌಡ ರವರ ಹೆಸರನ್ನು ನಾಮಕರಣ ಮಾಡಲಾಗಿದೆ. ಪ್ರಸ್ತುತ ವಾರ್ಡ್ ಸಂಖ್ಯೆ:66ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್, ಮಿಲ್ಕ್ ಕಾಲೋನಿಯಲ್ಲಿರುವ ಆಟದ ಮೈದಾನಕ್ಕೆ "ಶ್ರೀ ನಾಡಪ್ರಭು ಕೆಂಪೇಗೌಡ ಕ್ರೀಡಾಂಗಣ" ಎಂದು ನಾಮಕರಣ ಮಾಡಲು ಅವಕಾಶ ಇರುವುದಿಲ್ಲ ಎಂಬ ಅಂಶವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಈ ಸಂಬಂಧ ದಿನಾಂಕ:12-04-2012 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ:246/2011-12 ರಲ್ಲಿ ನಿಯಮಗಳನ್ನು ಅನುಸರಿಸಿ ನಾಮಕರಣ ಮಾಡಲು ಸಮಿತಿ ಒಪ್ಪಿತು ಹಾಗೂ ಮಾನ್ಯ ಆಯುಕ್ತರ ಟಿಪ್ಪಣಿ ಮಾರ್ಪಡಿಸಿ ಸದರಿ ಆಟದ ಮೈದಾನಕ್ಕೆ "ಶ್ರೀ ನಾಡಪ್ರಭು ಕೆಂಪೇಗೌಡ ಕ್ರೀಡಾಂಗಣ" ಎಂದು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ ಹಾಗೂ ದಿನಾಂಕ:29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:138(133)/2012-13 ರಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯವನ್ನು ಒಪ್ಪುವುದೆಂದು ನಿರ್ಣಯಿಸಿದ್ದು, ಸದರಿ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, 293ನೇ ಪ್ರಕರಣದ (1)ನೇ ಉಪ ಪ್ರಕರಣ, 7ನೇ ನಿಯಮಕ್ಕೆ ವಿರುದ್ಧವಾಗಿರುವುದರಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, ಪ್ರಕರಣ 98ರ ಮೇರೆಗೆ ಸದರಿ ನಿರ್ಣಯವನ್ನು ರದ್ದುಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರದ ಪತ್ರದ ಸಂಖ್ಯೆ:ನಅಇ 327 ಎಂಎನ್‌ಜಿ 2012 ದಿನಾಂಕ:30-10-2012 ರಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:66ರ ವ್ಯಾಪ್ತಿಯಲ್ಲಿ ಬರುವ ಸುಬ್ರಮಣ್ಯನಗರ ಎ ಬ್ಲಾಕ್, ಮಿಲ್ಕ್ ಕಾಲೋನಿಯಲ್ಲಿರುವ ಆಟದ ಮೈದಾನಕ್ಕೆ

"ಶ್ರೀ ನಾಡಪ್ರಭು ಕೆಂಪೇಗೌಡ ಕ್ರೀಡಾಂಗಣ" ಎಂದು ನಾಮಕರಣ ಮಾಡಲು ಪಾಲಿಕೆಯ ದಿನಾಂಕ: 29-05-2012ರ ವಿಷಯದ ಸಂಖ್ಯೆ:138(133)/2012-13 ರಲ್ಲಿ ಕೈಗೊಂಡಿರುವ ನಿರ್ಣಯದ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿರುತ್ತಾರೆ.

ಆದುದರಿಂದ, ದಿನಾಂಕ:30-10-2012ರ ಸರ್ಕಾರದ ಆದೇಶವನ್ನು ದಾಖಲಾತಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-01-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸರ್ಕಾರದ ಆದೇಶವನ್ನು ದಾಖಲಿಸಿಕೊಳ್ಳಲಾಗಿದೆ ಹಾಗೂ ನಗರದ ಹಲವು ಕಡೆಗಳಲ್ಲಿ ಉದ್ಯಾನವನ, ಕ್ರೀಡಾಂಗಣ, ವೃತ್ತ, ರಸ್ತೆಗಳಿಗೆ ಒಂದೇ ಹೆಸರನ್ನು ನಾಮಕರಣ ಮಾಡಿರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ನಾಮಕರಣದ ಬಗ್ಗೆ ಸರ್ಕಾರವನ್ನು ಮತ್ತೊಮ್ಮೆ ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಸರ್ಕಾರದ ಆದೇಶವನ್ನು ದಾಖಲಿಸಿಕೊಳ್ಳಲಾಗಿದೆ ಹಾಗೂ ನಗರದ ಹಲವು ಕಡೆಗಳಲ್ಲಿ ಉದ್ಯಾನವನ, ಕ್ರೀಡಾಂಗಣ, ವೃತ್ತ, ರಸ್ತೆಗಳಿಗೆ ಒಂದೇ ಹೆಸರನ್ನು ನಾಮಕರಣ ಮಾಡಿರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ನಾಮಕರಣದ ಬಗ್ಗೆ ಸರ್ಕಾರವನ್ನು ಮತ್ತೊಮ್ಮೆ ಕೋರುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (403) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:30-10-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:293/2012-13 ರಲ್ಲಿ ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಳಕಂಡಂತೆ ನಾಮಕರಣ ಮಾಡುವ ಬಗ್ಗೆ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಗಿರುತ್ತದೆ.

1. ವಾರ್ಡ್ ಸಂಖ್ಯೆ:65ರ ಕಾಡುಮಲ್ಲೇಶ್ವರ ವಿಭಾಗದ ವ್ಯಾಪ್ತಿಯ ಮಲ್ಲೇಶ್ವರಂ 9ನೇ ಅಡ್ಡರಸ್ತೆಗೆ ಶ್ರೀ. ರವಿ ಕಿರ್ಲೋಸ್ಕರ್ ರವರ ಹೆಸರನ್ನು ನಾಮಕರಣ ಮಾಡುವುದು.
2. ವಾರ್ಡ್ ಸಂಖ್ಯೆ:65ರ ಕಾಡುಮಲ್ಲೇಶ್ವರ ವಿಭಾಗದ ವ್ಯಾಪ್ತಿಯ ಪೂರ್ವ ಉದ್ಯಾನವನದ ರಸ್ತೆಗೆ ವೇದ ಬ್ರಹ್ಮ ಸತ್ಯನಾರಾಯಣ ಶಾಸ್ತ್ರಿ (ಗಣಿ) ರವರ ಹೆಸರನ್ನು ನಾಮಕರಣ ಮಾಡುವುದು.
3. ವಾರ್ಡ್ ಸಂಖ್ಯೆ:64ರ ರಾಜಾಮಹಲ್ ಗುಟ್ಟಹಳ್ಳಿಗೆ ರಾಜಾಮಹಲ್ ನಗರ ಎಂದು ನಾಮಕರಣ ಮಾಡುವುದು.
4. ವಾರ್ಡ್ ಸಂಖ್ಯೆ:64ರ ರಾಜಾಮಹಲ್ ಗುಟ್ಟಹಳ್ಳಿ ವಿಭಾಗದ ವ್ಯಾಪ್ತಿಯ ಈಜುಕೊಳ ಬಡಾವಣೆ ಉದ್ಯಾನವನಕ್ಕೆ ಶ್ರೀ ಪಿ.ರಾಮದೇವ್ ಉದ್ಯಾನವನ ಎಂದು ನಾಮಕರಣ ಮಾಡುವುದು.
5. ವಾರ್ಡ್ ಸಂಖ್ಯೆ:64ರ ರಾಜಾಮಹಲ್ ಗುಟ್ಟಹಳ್ಳಿ ವ್ಯಾಪ್ತಿಯ ಜಬ್ಬಾರ್‌ಬ್ಲಾಕ್‌ಗೆ ಭುವನೇಶ್ವರಿನಗರ ಎಂದು ನಾಮಕರಣ ಮಾಡುವುದು.
6. ವಾರ್ಡ್ ಸಂಖ್ಯೆ:35ರ ನ್ಯೂ ಬಿ.ಇ.ಎಲ್ ರಸ್ತೆಗೆ ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರವರ ಹೆಸರನ್ನು ಪುನರ್ ನಾಮಕರಣ ಮಾಡುವುದು.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:01-12-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆ, ಉದ್ಯಾನವನ ಇತ್ಯಾದಿಗಳಿಗೆ ಮೇಲ್ಕಂಡಂತೆ ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-01-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:30-01-2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ನಾಮಕರಣಗಳನ್ನು ಮಾಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.......................2

ಮಹಾಪೌರರು ಮೇಲ್ಕಂಡ. ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:30-01-2013ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ನಾಮಕರಣಗಳನ್ನು ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (321) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾಗಡಿ ರಸ್ತೆಯ ಮೆಟ್ರೋ ರೀಚ್-2 ರಲ್ಲಿ ಲೆಪ್ರೋಸಿ ಆಸ್ಪತ್ರೆಯಿಂದ ಡಾ॥ ರಾಜ್‌ಕುಮಾರ್ ರಸ್ತೆ ಜಂಕ್ಷನ್‌ವರೆಗಿನ (ಪಿಯರ್ 210 ರಿಂದ ಪಿಯರ್ 245 ರವರೆಗೆ) ಮೆಟ್ರೋ ಕಾಮಗಾರಿಯು ನಡೆಯುತ್ತಿರುವುದರಿಂದ ರಸ್ತೆಯು ಹಾಳಾಗಿರುತ್ತದೆ ಹಾಗೂ ರಸ್ತೆ ದುರಸ್ಥಿ ಮತ್ತು ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ **High Power Committee** ಯ 14ನೇ ಸಭೆ ದಿನಾಂಕ:19-03-2011 ರಲ್ಲಿ ನಿರ್ಣಯಿಸಿದಂತೆ ಈ ಕಾಮಗಾರಿಗೆ ರೂ.422.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಸಲ್ಲಿಸಲಾಗಿದೆ. ದಿನಾಂಕ:24-06-2011 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಡವಳಿಗಳ ಪ್ರಕಾರ ಹಾಗೂ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ:40(113)/2011-12 ರಲ್ಲಿ ನೀಡಿರುವ ಆಡಳಿತಾತ್ಮಕ ಅನುಮೋದನೆಯ ಪ್ರಕಾರ ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರ ಸಂಖ್ಯೆ:ಮುಅ(ರಮೂಸೌ)/ಎಡಿಎಮ್/ಎಎಸ್/12/12-13, ದಿನಾಂಕ:27-08-2012ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ಮುಅ(ರಮೂಸೌ)/ಟಿಎಸ್/04/12-13, ದಿನಾಂಕ:27-08-2012ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗೆ ಜಾಬ್ ಸಂಖ್ಯೆಯನ್ನು ಪಡೆಯಲಾಗಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.422.00 ಲಕ್ಷಗಳಿಗೆ ಲೆಕ್ಕ ಶೀರ್ಷಿಕೆ **P-2891 - Comprehensive Development of Roads under Metro Corridor in First Phase Reach – 1,2.3 & 4 (50% contribution from BMRCL, Estimated Cost Rs.100.00 Crores)** ಅಡಿಯಲ್ಲಿ ತೆಗೆದುಕೊಳ್ಳಲು ಅನುಮೋದನೆ ನೀಡಲಾಗಿದೆ.

ದಿನಾಂಕ:19-03-2011 ರಂದು ನಡೆದ 14ನೇ **High Power Committee** ಯಲ್ಲಿ ಮೆಟ್ರೋ ರೈಲು ನಿಗಮ ನಿಯಮಿತ ರವರು ಅಂದಾಜು ಮೊತ್ತದ ರೂ.422.00 ಲಕ್ಷಗಳಲ್ಲಿ ಶೇ.50% ರಷ್ಟು ಅಂದರೆ ರೂ.211.00 ಲಕ್ಷಗಳನ್ನು ನೀಡಬೇಕೆಂದು ತೀರ್ಮಾನಿಸಲಾಗಿದೆ.

ಈ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಟಿಇಸಿ) ರವರು ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂವರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರುಗಳು ತಾಂತ್ರಿಕವಾಗಿ ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ಆರ್ಥಿಕ ಬಿಡ್‌ಗಳು ದಿನಾಂಕ:07-11-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ.

1. ಟೆಂಡರ್‌ಗಿಟ್ಟ ಮೊತ್ತ ರೂ.4,16,78,816/- **(SR of 2011-12)** ಹಾಗೂ ರೂ.4,16,98,188/- **(SR of 2012-13)**
2. ಇ.ಎಂ.ಡಿ ಮೊತ್ತ: ರೂ.6,26,000/- (ಎಲ್ಲಾ ಏಜೆನ್ಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಸಲ್ಲಿಸಿರುತ್ತಾರೆ)

| ಕ್ರ. ಸಂ. | ಗುತ್ತಿಗೆದಾರರ ಹೆಸರು | ನಮೂದಿತ ಟೆಂಡರ್ ಮೊತ್ತ | ಟೆಂಡರ್ ಪ್ರೀಮಿಯಂ 2011-12ರ ದರಪಟ್ಟಿಗೆ ಹೋಲಿಸಿದಾಗ | ಟೆಂಡರ್ ಪ್ರೀಮಿಯಂ 2012-13ರ ದರಪಟ್ಟಿಗೆ ಹೋಲಿಸಿದಾಗ | ಷರಾ |
|---|---|---|---|---|---|
| 1 | ಶ್ರೀ.ಎಂ.ಎಸ್.ವೆಂಕಟೇಶ್ | 3,41,77,175.00 | (–) 18.00% | (–) 18.04% | **L1** |
| 2 | ಶ್ರೀ.ಎಂ.ರಮೇಶ್ | 4,28,66,099.00 | (+) 2.85% | (+) 2.80% | **L2** |
| 3 | ಶ್ರೀ.ರಾಮಯ್ಯ ಲೋಕೇಶ್ | 4,31,64,157.00 | (+) 3.56% | (+) 3.52% | **L3** |

..................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನಲ್ಲಿ ಅತೀ ಕಡಿಮೆ ಮೊತ್ತ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಎಂ.ಎಸ್.ವೆಂಕಟೇಶ್ ರವರು ರೂ.3,41,77,175.00 ಗಳನ್ನು ನಮೂದಿಸಿದ್ದು, ಸದರಿ ಮೊತ್ತವನ್ನು 2011-12ನೇ ಸಾಲಿಗೆ ದರಪಟ್ಟಿಗೆ ತಯಾರಿಸಿದ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.18.00% ಕಡಿಮೆ ಇದ್ದು, ಇದನ್ನು 2012-13ನೇ ಸಾಲಿನ ಚಾಲ್ತಿ ದರಪಟ್ಟಿಗೆ ಹೋಲಿಸಿದಾಗ ಶೇ.(-) 18.04% ಕಡಿಮೆಯಾಗಿದ್ದು, ದರಗಳು ಸಮಂಜಸವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-12-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 14-12-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (358) / 2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಮೈಸೂರು ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಯೋಜನೆಯನ್ನು **(Ch 0.00** ಕಿ.ಮೀ. ನಿಂದ **Ch:1.00** ಕಿ.ಮೀ. ವರೆಗೆ) ಪಾಲಿಕೆಯಿಂದ ಕೈಗೊಂಡಿದ್ದು, ಟೆಂಡರ್ ಆಧಾರದ ಮೇಲೆ ಒಟ್ಟು ಮೊತ್ತ ರೂ.5,71,43,630.00 ಗಳಿಗೆ **(14.8% above SR of 2009-10) M/s. Lakshmi Construction** ಎಂಬ ಗುತ್ತಿಗೆದಾರರಿಗೆ ವಹಿಸಿ ದಿನಾಂಕ:03-05-2012 ರಂದು ಕಾರ್ಯಾದೇಶ ನೀಡಿ 15 ತಿಂಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಯು ಪ್ರಾರಂಭವಾಗಿ ರಸ್ತೆ ಅಗಲೀಕರಣಕ್ಕೆ ಬೇಕಾದ ಖಾಸಗಿ ವ್ಯಕ್ತಿಗಳಿಗೆ ಸೇರಿದ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳಾದ ಮುಸ್ಲಿಂ ಸ್ಮಶಾನ ಮತ್ತು ಕ್ರಿಸ್ತ ಸ್ಮಶಾನಗಳಿಂದ ಜಾಗವನ್ನು ತೆಗೆದುಕೊಳ್ಳಬೇಕಾಗಿದ್ದು ಮತ್ತು ರಸ್ತೆ ಅಗಲೀಕರಣಕ್ಕೆ ಅಡ್ಡವಾಗಿ ಬರುವ ವಿದ್ಯುತ್ ಕಂಬಗಳನ್ನು ಮತ್ತು ನೀರು ಸರಬರಾಜು ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸಬೇಕಾಗಿದ್ದುದರಿಂದ ಹಾಗೂ ಸದರಿ ಯೋಜನೆಯೊಂದಿಗೆ ವೈಜ್ಞಾನಿಕವಾಗಿ ಹಾಗೂ ಮುಂದಾಲೋಚನೆಯಿಂದ ಮುಂದಿನ ದಿನಗಳಲ್ಲಿ ನಾಗರೀಕ ಸೌಲಭ್ಯ ಕೊಳವೆ ಮತ್ತು ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆತವನ್ನು ತಡೆಗಟ್ಟಲು **Utility Duct** ಅನ್ನು ನಿರ್ಮಿಸುವುದು ಅಗತ್ಯವೆಂದು ಪರಿಗಣಿಸಿ ಮೂಲ ಗುತ್ತಿಗೆದಾರರಾದ **M/s. Lakshmi Construction** ರವರಿಗೆ ಹೆಚ್ಚುವರಿಯಾಗಿ **Utility Duct** ಅನ್ನು ನಿರ್ಮಿಸಲು ರೂ.3,89,90,955.00 ಗಳ **(EIRL)** ಮಂಜೂರಾತಿ ನೀಡಿ ದಿನಾಂಕ:26-08-2011 ರಂದು **Supplementary Agreement** ಮಾಡಿಕೊಂಡು ಹೆಚ್ಚುವರಿ ಕಾಮಗಾರಿಯನ್ನು ನಿರ್ವಹಿಸಲು ಹಾಗೂ ನಾಗರೀಕ ಸೌಲಭ್ಯ ಕೊಳವೆ ಮತ್ತು ಕೇಬಲ್ ಸ್ಥಳಾಂತರಿಸಲು ಬೇಕಾದ ಹೆಚ್ಚುವರಿ 15 ತಿಂಗಳ ಸಮಯಾವಕಾಶವನ್ನು ಅಂದರೆ ದಿನಾಂಕ:02-08-2011 ರಿಂದ 01-11-2012 ರವರೆಗೆ **ದಂಡ ರಹಿತವಾಗಿ** ನೀಡಲಾಗಿರುತ್ತದೆ.

ಸದರಿ ಕಾಮಗಾರಿಯ ಗುತ್ತಿಗೆದಾರರಿಗೆ ನೀಡಿದ ಮೊದಲ ಕಾಲಾವಕಾಶ ಹೆಚ್ಚುವರಿಯಾಗಿ ಮತ್ತೆ ನೀಡಿದ ಕಾಲಾವಕಾಶ ಒಟ್ಟು 30 ತಿಂಗಳ ಕಾಲಾವಕಾಶವನ್ನು ಯಶಸ್ವಿಯಾಗಿ ಉಪಯೋಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸದೆ ಸಂಬಂಧವಿಲ್ಲದ ಕಾರಣಗಳನ್ನು ನೀಡುತ್ತಾ ಕಾಮಗಾರಿಯನ್ನು ನಿಧಾನಗತಿಯಲ್ಲಿ ಮಾಡುತ್ತಾ ಬಂದಿರುತ್ತಾರೆ. ಸದರಿ ಕಾಮಗಾರಿ ನಿರ್ವಹಣೆಯಲ್ಲಿಯೂ ಯಾವುದೇ ಕಾರ್ಯಕ್ಷಮತೆಯನ್ನು ತೋರಿಸದೆ ಬೇಜವಾಬ್ದಾರಿತನದಿಂದ ಕಾಮಗಾರಿಯಲ್ಲಿ ಲೇವೆಲ್, ಪ್ಲಂಬ್ ಮತ್ತು ಲೈನ್‌ನ್ನು ಸರಿಯಾಗಿ ಕಾಪಾಡಿಕೊಂಡಿರುವುದಿಲ್ಲ ಮರದ ಬುಡ ತೆಗೆದು ರಸ್ತೆ ಅಂಚಿನಲ್ಲಿಯೇ ಶೇಖರಿಸಿ ಸಾರ್ವಜನಿಕರಿಗೆ ಬಹಳ ತೊಂದರೆಯುಂಟು ಮಾಡಿರುತ್ತಾರೆ ಹಾಗೂ ಸದರಿ ಗುತ್ತಿಗೆದಾರರು ಕೆಳಕಂಡ ಅಂಶಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

1. ಕೆಲಸದ ಪ್ರಗತಿಗೆ ಬೇಕಾದ ಅಗತ್ಯ ಕೂಲಿಕಾರ್ಮಿಕರನ್ನು ನೇಮಿಸಲು ವಿಫಲರಾಗಿರುತ್ತಾರೆ ಹಾಗೂ ಕಾಮಗಾರಿ ನಿರ್ವಹಣೆಯಲ್ಲಿ **Workmanship** ತೃಪ್ತಿಕರವಾಗಿರುವುದಿಲ್ಲ.
2. ಕೆಲಸದ ಸ್ಥಳದಲ್ಲಿ ಮಣ್ಣು ಅಗೆದು ಮೋರಿಯನ್ನು ನಿರ್ಮಿಸದೆ ಖಾಸಗಿ ವ್ಯಕ್ತಿಗಳ ಆಸ್ತಿಗಳಿಗೆ ಧಕ್ಕೆಯನ್ನುಂಟು ಮಾಡಿರುತ್ತಾರೆ. ಸದರಿ ಬೇಜವಾಬ್ದಾರಿತನಕ್ಕಾಗಿ ಗುತ್ತಿಗೆದಾರರ ವಿರುದ್ಧ ಬ್ಯಾಟರಾಯನಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.
3. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ನಿಧಾನಗತಿಯಲ್ಲಿ ನಿರ್ವಹಿಸುತ್ತಿರುವುದಕ್ಕೆ ಇಲ್ಲಿಯವರೆಗೂ ರೂ.2,35,000.00ಗಳ ದಂಡ ವಿಧಿಸಿದ್ದರೂ ಸಹ ಕಾಮಗಾರಿಯನ್ನು ಹೆಚ್ಚುವರಿಯಾಗಿ ನೀಡಿದ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳದೆ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾಗಿರುತ್ತಾರೆ.

.....................2

4. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ವಿಳಂಬವಾಗುತ್ತಿದೆಯೆಂದು ಸ್ಥಳೀಯ ಸಾರ್ವಜನಿಕರು ಆಯುಕ್ತರ ಕಛೇರಿಗೆ, ಟಿ.ವಿ.ಸಿ.ಸಿ. ಕಛೇರಿಗೆ ಹಾಗೂ ಬಿ.ಎಂ.ಟಿ.ಎಫ್ ಸಂಸ್ಥೆಗೆ ದೂರನ್ನು ದಾಖಲಿಸಿರುತ್ತಾರೆ.

ಸ್ಥಳದಲ್ಲಿ **Work Front** ಇದ್ದರೂ ಸಹ ಸದರಿ ಗುತ್ತಿಗೆದಾರರು ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸದೇ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ರಸ್ತೆಯನ್ನು ದುರಾವಸ್ಥೆಯಲ್ಲಿಟ್ಟಿರುತ್ತಾರೆ. ಕಾಮಗಾರಿ ಪ್ರಗತಿಯನ್ನು ಹೆಚ್ಚಿಸಿ ಶೀಘ್ರವಾಗಿ ಪೂರ್ಣಗೊಳಿಸುವಂತೆ ಹಲವೊಂದು ನೋಟಿಸ್‌ಗಳನ್ನು ಕಾಮಗಾರಿಯ ಪ್ರಾರಂಭಿಸಿದ ದಿನದಿಂದಲೂ ನೀಡಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ಗುತ್ತಿಗೆದಾರರಿಗೆ ದಿನಾಂಕ:12-09-2012 ರಂದು ಅಂತಿಮ ನೋಟಿಸ್ ಅನ್ನು ನೀಡಿ ಕಾಮಗಾರಿ ಅಂತಿಮ ಅಳತೆಗಳನ್ನು ತೆಗೆದುಕೊಳ್ಳಲು ದಿನಾಂಕ:22-09-2012 ರಂದು ನಿಗಧಿಪಡಿಸಲಾಗಿತ್ತು. ಆದರೆ, ಸದರಿ ಗುತ್ತಿಗೆದಾರರು ಅಂತಿಮ ನೋಟಿಸ್‌ಗೆ ಉತ್ತರವನ್ನು ನೀಡಿ ಕಾಮಗಾರಿಯನ್ನು ಸಕಾಲದಲ್ಲಿ ಪೂರ್ಣಗೊಳಿಸುತ್ತೇನೆಂದು ತಿಳಿಸಿರುತ್ತಾರೆ ಹಾಗೂ ದಿನಾಂಕ: 24-09-2012 ರಂದು ಪೂಜ್ಯ ಮಹಾಪೌರರು ಮತ್ತು ಆಯುಕ್ತರು ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ **M/s. Lakshmi Construction** ಗುತ್ತಿಗೆದಾರರು ಹಾಜರಿದ್ದು ಇವರ ಸಮಕ್ಷಮದಲ್ಲಿ ಕಾಮಗಾರಿಯ ಪ್ರಗತಿ ಪರಿಶೀಲಿಸಲಾಗಿ ಮತ್ತು ಸದರಿ ಗುತ್ತಿಗೆದಾರರ ವೈಫಲ್ಯಗಳನ್ನು ಅವಲೋಕಿಸಿ ಕಟ್ಟಕಡೆಯದಾಗಿ ಮತ್ತೊಂದು ಅವಕಾಶ ನೀಡಲಾಗಿದ್ದು, ನಂತರವೂ ಗುತ್ತಿಗೆದಾರರು ಪ್ರಗತಿಯನ್ನು ಸಾಧಿಸದಿದ್ದಲ್ಲಿ ಗುತ್ತಿಗೆ ರದ್ದುಪಡಿಸಲು ಕ್ರಮವಹಿಸಲು ತೀರ್ಮಾನಿಸಲಾಗಿತ್ತು.

ಈ ಮೇರೆಗೆ ದಿನಾಂಕ:24-09-2012 ರಿಂದ 02-11-2012 ರವರೆಗೆ ಗುತ್ತಿಗೆದಾರರು ಗುತ್ತಿಗೆಯನ್ನು ಪ್ರತಿನಿತ್ಯ ಅವಲೋಕಿಸಲಾಗಿ, ಗುತ್ತಿಗೆದಾರರು ಪ್ರತಿದಿನ ಕೇವಲ 10 ರಿಂದ 15 ಜನ ಕೂಲಿ ಕಾರ್ಮಿಕರನ್ನು ನಿಯೋಜಿಸಿಕೊಂಡು ಕಾಮಗಾರಿ ನಿರ್ವಹಿಸುತ್ತಿದ್ದು ಹಾಗೂ ಕೆಲವೊಂದು ದಿನ ಯಾವುದೇ ಕೂಲಿಕಾರ್ಮಿಕರನ್ನು ಇಟ್ಟುಕೊಳ್ಳದೇ ಇರುವುದು ಕಂಡು ಬಂದಿರುತ್ತದೆ. ಈ ಬೃಹತ್ ಕಾಮಗಾರಿಗೆ ಪ್ರತಿದಿನ ಸರಾಸರಿ 40 ರಿಂದ 50 ಜನ ಕಾರ್ಮಿಕರು, ಯಂತ್ರೋಪಕರಣಗಳು ಅವಶ್ಯಕತೆ ಇದ್ದು, ಹಗಲು-ರಾತ್ರಿ ಕೆಲಸ ನಿರ್ವಹಿಸಬೇಕಾಗಿತ್ತು. ಆದರೆ ಗುತ್ತಿಗೆದಾರರು ಈ ಬಗ್ಗೆ ಯಾವುದೇ ಆಸಕ್ತಿ ವಹಿಸದೆ ಪಾಲಿಕೆ ಅಧಿಕಾರಿಗಳ ಸಲಹೆ, ಸೂಚನೆ, ನಿರ್ದೇಶನಗಳನ್ನು ಪಾಲಿಸದೆ ನಿರ್ಲಕ್ಷ್ಯ ತೋರಿರುತ್ತಾರೆ.

ಸದರಿ ರಸ್ತೆ ಕಾಮಗಾರಿ ವಿಳಂಬದ ಬಗ್ಗೆ ಹಾಗೂ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಪ್ರತಿನಿತ್ಯ ಆಗುತ್ತಿರುವ ತೊಂದರೆಯ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಪ್ರಕಟಣೆಯಾಗುತ್ತಿದ್ದು, ಸಾರ್ವಜನಿಕರು ಲಿಖಿತ ದೂರನ್ನು ಸಹ ನೀಡಿರುತ್ತಾರೆ.

ಇವುಗಳನ್ನೆಲ್ಲಾ ಗಮನಿಸಿದಾಗ ಸದರಿ ಗುತ್ತಿಗೆದಾರರಿಗೆ ಎಷ್ಟೇ ಕಾಲಾವಕಾಶ ಕೊಟ್ಟರೂ ಕಾಮಗಾರಿಯನ್ನು ಪೂರ್ಣಗೊಳಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಗುತ್ತಿಗೆದಾರರು ಗುತ್ತಿಗೆ ಕರಾರನ್ನು ಉಲ್ಲಂಘಿಸಿರುವುದು ಮೇಲ್ಕಂಡ ಅಂಶಗಳಿಂದ ದೃಢಪಟ್ಟಿರುತ್ತದೆ.

ಈ ಮೇರೆಗೆ ಮೈಸೂರು ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಯೋಜನೆಯ **(Ch 0.00** ಕಿ.ಮೀ. ನಿಂದ **Ch:1.00** ಕಿ.ಮೀ. ವರೆಗೆ**)** ಗುತ್ತಿಗೆದಾರರಾದ **M/s. Lakshmi Construction** ರವರ ಗುತ್ತಿಗೆಯನ್ನು ಟೆಂಡರ್ ನಿಯಮದಂತೆ, ಗುತ್ತಿಗೆದಾರರ **Risk and Cost** ನಲ್ಲಿ ರದ್ದುಪಡಿಸುವುದು ಸೂಕ್ತವಾಗಿದೆ. ಸದರಿ ಯೋಜನೆಯು ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಹಾಗೂ ಮುಂದಿನ ಮಳೆಗಾಲದ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ತಪ್ಪಿಸುವ ದೃಷ್ಟಿಯಿಂದ ಉಳಿಕೆ ಕಾಮಗಾರಿ ಕೆಲಸಕ್ಕೆ ಟೆಂಡರ್ ಕರೆದರೆ ವಿಳಂಬವಾಗುವುದರಿಂದ **KRIDL** ಸಂಸ್ಥೆಗೆ ವಹಿಸುವುದು ಸೂಕ್ತವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22-11-2012ರ ಟಿಪ್ಪಣಿ.

.........................3

1. ಸದರಿ ಮೂಲ ಗುತ್ತಿಗೆದಾರರಾದ **M/s. Lakshmi Construction** ರವರ ಗುತ್ತಿಗೆಯನ್ನು ರದ್ದುಪಡಿಸಿ ಉಳಿಕೆ ಕಾಮಗಾರಿಯನ್ನು ಸದರಿ ಗುತ್ತಿಗೆದಾರರ **Risk and Cost** ನಲ್ಲಿ ಕೈಗೊಳ್ಳಲು ಅನುಮೋದನೆ.
2. ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ಪ್ರಸಕ್ತ ಸಾಲಿನ ದರಪಟ್ಟಿ 2012-13 ರಂತೆ ತಯಾರಿಸಿರುವ "ಮೈಸೂರು ರಸ್ತೆಯ ಸರಪಳಿ 0.00 ಕಿ.ಮೀ ನಿಂದ ಸರಪಳಿ 1.00 ಕಿ.ಮೀ.ನ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ", ಅಂದಾಜು ಮೊತ್ತ ರೂ.480.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
3. ಸದರಿ ಕಾಮಗಾರಿಯನ್ನು ಟೆಂಡರ್ ಕರೆದು ನಿರ್ವಹಿಸುವುದು ವಿಳಂಬವಾಗುವ ಪ್ರಯುಕ್ತ **KRIDL** ಸಂಸ್ಥೆಯಿಂದ ಕಾಮಗಾರಿ ನಿರ್ವಹಿಸಲು ಅನುಮೋದನೆ.
4. **M/s. Lakshmi Construction** ಗುತ್ತಿಗೆದಾರರ ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಹಾಗೂ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳಲು ವಿಫಲರಾದ ಪ್ರಯುಕ್ತ, ಟೆಂಡರ್ ನಿಯಮಾವಳಿಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವುದರಿಂದ, ಪಾಲಿಕೆಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದ ಹಿನ್ನಲೆಯಲ್ಲಿ ಸದರಿ ಗುತ್ತಿಗೆದಾರರನ್ನು ಮುಂದಿನ ಎರಡು ವರ್ಷಗಳಲ್ಲಿ ಪಾಲಿಕೆಯ ಯಾವುದೇ ಟೆಂಡರ್‌ಗಳಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರಲು ಅನುಮೋದನೆ

ಹಾಗೂ ಕಡತವನ್ನು ಪರಿಶೀಲಿಸಲಾಯಿತು. ಸದರಿ ಯೋಜನೆಗೆ ತಡೆಯಿದ್ದಂತಹ ಅಗತ್ಯ ಉಪಯುಕ್ತತೆಗಳನ್ನು **(Utility Shifting)** ಸಕಾಲದಲ್ಲಿ ಸ್ಥಳಾಂತರಿಸದೇ ಇರುವುದು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬ, ರಸ್ತೆಬದಿ ಮರಗಳನ್ನು ತೆರವು ಮಾಡುವ ಕಾರ್ಯದಲ್ಲಿ ವಿಳಂಬವಾದ ಕಾರಣ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುತ್ತದೆ. ಗುತ್ತಿಗೆದಾರರು ಮನವಿಯನ್ನು ಸಲ್ಲಿಸಿ ದಿನಾಂಕ:30-04-2013 ರೊಳಗಾಗಿ ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸುವುದಾಗಿ ಕೋರಿರುವ ಮೇರೆಗೆ, ಮೇಲ್ಕಂಡ ಕಾರಣಗಳಿಂದ ವಿಳಂಬವಾಗಿರುವುದನ್ನು ಪರಿಗಣಿಸಿ, ಹಾಲಿ ಗುತ್ತಿಗೆದಾರರನ್ನೇ ಮುಂದುವರಿಸಿ ಕಾಮಗಾರಿಯನ್ನು ಕಡ್ಡಾಯವಾಗಿ ದಿನಾಂಕ:30-04-2013 ರೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:09-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:09-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 09-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (359) / 2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಮೈಸೂರು ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಯೋಜನೆಯನ್ನು **(Ch 1.00** ಕಿ.ಮೀ. ನಿಂದ **Ch:2.00** ಕಿ.ಮೀ. ವರೆಗೆ) ಪಾಲಿಕೆಯಿಂದ ಕೈಗೊಂಡಿದ್ದು, ಟೆಂಡರ್ ಆಧಾರದ ಮೇಲೆ ಒಟ್ಟು ಮೊತ್ತ ರೂ.5,57,70,189.00 ಗಳಿಗೆ **(14.8% above SR of 2009-10) M/s. Lakshmi Construction** ಎಂಬ ಗುತ್ತಿಗೆದಾರರಿಗೆ ವಹಿಸಿ ದಿನಾಂಕ:03-05-2012 ರಂದು ಕಾರ್ಯಾದೇಶ ನೀಡಿ 15 ತಿಂಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಯು ಪ್ರಾರಂಭವಾಗಿ ರಸ್ತೆ ಅಗಲೀಕರಣಕ್ಕೆ ಬೇಕಾದ ಖಾಸಗಿ ವ್ಯಕ್ತಿಗಳಿಗೆ ಸೇರಿದ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳಾದ ಮುಸ್ಲಿಂ ಸ್ಮಶಾನ ಮತ್ತು ಕ್ರಿಸ್ತ ಸ್ಮಶಾನಗಳಿಂದ ಜಾಗವನ್ನು ತೆಗೆದುಕೊಳ್ಳಬೇಕಾಗಿದ್ದು ಮತ್ತು ರಸ್ತೆ ಅಗಲೀಕರಣಕ್ಕೆ ಅಡ್ಡವಾಗಿ ಬರುವ ವಿದ್ಯುತ್ ಕಂಬಗಳನ್ನು ಮತ್ತು ನೀರು ಸರಬರಾಜು ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸಬೇಕಾಗಿದ್ದುದರಿಂದ ಹಾಗೂ ಸದರಿ ಯೋಜನೆಯೊಂದಿಗೆ ವೈಜ್ಞಾನಿಕವಾಗಿ ಹಾಗೂ ಮುಂದಾಲೋಚನೆಯಿಂದ ಮುಂದಿನ ದಿನಗಳಲ್ಲಿ ನಾಗರೀಕ ಸೌಲಭ್ಯ ಕೊಳವೆ ಮತ್ತು ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆತವನ್ನು ತಡೆಗಟ್ಟಲು **Utility Duct** ಅನ್ನು ನಿರ್ಮಿಸುವುದು ಅಗತ್ಯವೆಂದು ಪರಿಗಣಿಸಿ ಮೂಲ ಗುತ್ತಿಗೆದಾರರಾದ **M/s. Lakshmi Construction** ರವರಿಗೆ ಹೆಚ್ಚುವರಿಯಾಗಿ **Utility Duct** ಅನ್ನು ನಿರ್ಮಿಸಲು ರೂ.3,51,42,434.00 ಗಳ **(EIRL)** ಮಂಜೂರಾತಿ ನೀಡಿ ದಿನಾಂಕ:26-08-2011 ರಂದು **Supplementary Agreement** ಮಾಡಿಕೊಂಡು ಹೆಚ್ಚುವರಿ ಕಾಮಗಾರಿಯನ್ನು ನಿರ್ವಹಿಸಲು ಹಾಗೂ ನಾಗರೀಕ ಸೌಲಭ್ಯ ಕೊಳವೆ ಮತ್ತು ಕೇಬಲ್ ಸ್ಥಳಾಂತರಿಸಲು ಬೇಕಾದ ಹೆಚ್ಚುವರಿ 15 ತಿಂಗಳ ಸಮಯಾವಕಾಶವನ್ನು ಅಂದರೆ ದಿನಾಂಕ: 02-08-2011 ರಿಂದ 01-11-2012 ರವರೆಗೆ ದಂಡ ರಹಿತವಾಗಿ ನೀಡಲಾಗಿರುತ್ತದೆ.

ಸದರಿ ಕಾಮಗಾರಿಯ ಗುತ್ತಿಗೆದಾರರಿಗೆ ನೀಡಿದ ಮೊದಲ ಕಾಲಾವಕಾಶ ಹೆಚ್ಚುವರಿಯಾಗಿ ಮತ್ತೇ ನೀಡಿದ ಕಾಲಾವಕಾಶ ಒಟ್ಟು 30 ತಿಂಗಳ ಕಾಲಾವಕಾಶವನ್ನು ಯಶಸ್ವಿಯಾಗಿ ಉಪಯೋಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸದೆ ಸಂಬಂಧವಿಲ್ಲದ ಕಾರಣಗಳನ್ನು ನೀಡುತ್ತಾ ಕಾಮಗಾರಿಯನ್ನು ನಿಧಾನಗತಿಯಲ್ಲಿ ಮಾಡುತ್ತಾ ಬಂದಿರುತ್ತಾರೆ. ಸದರಿ ಕಾಮಗಾರಿ ನಿರ್ವಹಣೆಯಲ್ಲಿಯೂ ಯಾವುದೇ ಕಾರ್ಯಕ್ಷಮತೆಯನ್ನು ತೋರಿಸದೆ ಬೇಜವಾಬ್ದಾರಿತನದಿಂದ ಕಾಮಗಾರಿಯಲ್ಲಿ ಲೇವೆಲ್, ಪ್ಲಂಬ್ ಮತ್ತು ಲೈನ್‌ನ್ನು ಸರಿಯಾಗಿ ಕಾಪಾಡಿಕೊಂಡಿರುವುದಿಲ್ಲ ಮರದ ಬುಡ ತೆಗೆದು ರಸ್ತೆ ಅಂಚಿನಲ್ಲಿಯೇ ಶೇಖರಿಸಿ ಸಾರ್ವಜನಿಕರಿಗೆ ಬಹಳ ತೊಂದರೆಯುಂಟು ಮಾಡಿರುತ್ತಾರೆ ಹಾಗೂ ಸದರಿ ಗುತ್ತಿಗೆದಾರರು ಕೆಳಕಂಡ ಅಂಶಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

1. ಕೆಲಸದ ಪ್ರಗತಿಗೆ ಬೇಕಾದ ಅಗತ್ಯ ಕೂಲಿಕಾರ್ಮಿಕರನ್ನು ನೇಮಿಸಲು ವಿಫಲರಾಗಿರುತ್ತಾರೆ ಹಾಗೂ ಕಾಮಗಾರಿ ನಿರ್ವಹಣೆಯಲ್ಲಿ **Workmanship** ತೃಪ್ತಿಕರವಾಗಿರುವುದಿಲ್ಲ.
2. ಕೆಲಸದ ಸ್ಥಳದಲ್ಲಿ ಮಣ್ಣು ಅಗೆದು ಮೋರಿಯನ್ನು ನಿರ್ಮಿಸದೆ ಖಾಸಗಿ ವ್ಯಕ್ತಿಗಳ ಆಸ್ತಿಗಳಿಗೆ ಧಕ್ಕೆಯನ್ನುಂಟು ಮಾಡಿರುತ್ತಾರೆ. ಸದರಿ ಬೇಜವಾಬ್ದಾರಿತನಕ್ಕಾಗಿ ಗುತ್ತಿಗೆದಾರರ ವಿರುದ್ಧ ಬ್ಯಾಟರಾಯನಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.
3. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ನಿಧಾನಗತಿಯಲ್ಲಿ ನಿರ್ವಹಿಸುತ್ತಿರುವುದಕ್ಕೆ ಇಲ್ಲಿಯವರೆಗೂ ರೂ.123000.00 ದಂಡ ವಿಧಿಸಿದ್ದರೂ ಸಹ ಕಾಮಗಾರಿಯನ್ನು ಹೆಚ್ಚುವರಿಯಾಗಿ ನೀಡಿದ ಕಾಲಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳದೆ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾಗಿರುತ್ತಾರೆ.
4. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ವಿಳಂಬವಾಗುತ್ತಿದೆಯೆಂದು ಸ್ಥಳೀಯ ಸಾರ್ವಜನಿಕರು ಆಯುಕ್ತರ ಕಛೇರಿಗೆ, ಟಿ.ವಿ.ಸಿ.ಸಿ. ಕಛೇರಿಗೆ ಹಾಗೂ ಬಿ.ಎಂ.ಟಿ.ಎಫ್ ಸಂಸ್ಥೆಗೆ ದೂರನ್ನು ದಾಖಲಿಸಿರುತ್ತಾರೆ.

ಸ್ಥಳದಲ್ಲಿ **Work Front** ಇದ್ದರೂ ಸಹ ಸದರಿ ಗುತ್ತಿಗೆದಾರರು ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸದೇ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ರಸ್ತೆಯನ್ನು ದುರಾವಸ್ಥೆಯಲ್ಲಿಟ್ಟಿರುತ್ತಾರೆ. ಕಾಮಗಾರಿ ಪ್ರಗತಿಯನ್ನು ಹೆಚ್ಚಿಸಿ ಶೀಘ್ರವಾಗಿ ಪೂರ್ಣಗೊಳಿಸುವಂತೆ ಹನ್ನೊಂದು ನೋಟಿಸ್‌ಗಳನ್ನು ಕಾಮಗಾರಿಯ ಪ್ರಾರಂಭಿಸಿದ ದಿನದಿಂದಲೂ ನೀಡಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ಗುತ್ತಿಗೆದಾರರಿಗೆ ದಿನಾಂಕ:12-09-2012 ರಂದು ಅಂತಿಮ ನೋಟಿಸ್ ಅನ್ನು ನೀಡಿ ಕಾಮಗಾರಿ ಅಂತಿಮ ಅಳತೆಗಳನ್ನು ತೆಗೆದುಕೊಳ್ಳಲು ದಿನಾಂಕ:22-09-2012 ರಂದು ನಿಗಿಧಿಪಡಿಸಲಾಗಿತ್ತು. ಆದರೆ, ಸದರಿ ಗುತ್ತಿಗೆದಾರರು ಅಂತಿಮ ನೋಟಿಸ್‌ಗೆ ಉತ್ತರವನ್ನು ನೀಡಿ ಕಾಮಗಾರಿಯನ್ನು ಸಕಾಲದಲ್ಲಿ ಪೂರ್ಣಗೊಳಿಸುತ್ತೇನೆಂದು ತಿಳಿಸಿರುತ್ತಾರೆ ಹಾಗೂ ದಿನಾಂಕ:24-09-2012 ರಂದು ಪೂಜ್ಯ ಮಹಾಪೌರರು ಮತ್ತು ಆಯುಕ್ತರು ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ **M/s.Lakshmi Construction** ಗುತ್ತಿಗೆದಾರರು ಹಾಜರಿದ್ದು ಇವರ ಸಮಕ್ಷಮದಲ್ಲಿ ಕಾಮಗಾರಿಯ ಪ್ರಗತಿ ಪರಿಶೀಲಿಸಲಾಗಿ ಮತ್ತು ಸದರಿ ಗುತ್ತಿಗೆದಾರರ ವೈಫಲ್ಯಗಳನ್ನು ಅವಲೋಕಿಸಿ ಕಟ್ಟಕಡೆಯದಾಗಿ ಮತ್ತೊಂದು ಅವಕಾಶ ನೀಡಲಾಗಿದ್ದು, ನಂತರವೂ ಗುತ್ತಿಗೆದಾರರು ಪ್ರಗತಿಯನ್ನು ಸಾಧಿಸದಿದ್ದಲ್ಲಿ ಗುತ್ತಿಗೆ ರದ್ದುಪಡಿಸಲು ಕ್ರಮವಹಿಸುವುದೆಂದು ತೀರ್ಮಾನಿಸಲಾಗಿತ್ತು.

ಈ ಮೇರೆಗೆ ದಿನಾಂಕ:24-09-2012 ರಿಂದ 02-11-2012 ರವರೆಗೆ ಗುತ್ತಿಗೆದಾರರ ಗುತ್ತಿಗೆಯನ್ನು ಪ್ರತಿನಿತ್ಯ ಅವಲೋಕಿಸಲಾಗಿ, ಗುತ್ತಿಗೆದಾರರು ಪ್ರತಿದಿನ ಕೇವಲ 10 ರಿಂದ 15 ಜನ ಕೂಲಿ ಕಾರ್ಮಿಕರನ್ನು ನಿಯೋಜಿಸಿಕೊಂಡು ಕಾಮಗಾರಿ ನಿರ್ವಹಿಸುತ್ತಿದ್ದು ಹಾಗೂ ಕೆಲವೊಂದು ದಿನ ಯಾವುದೇ ಕೂಲಿಕಾರ್ಮಿಕರನ್ನು ಇಟ್ಟುಕೊಳ್ಳದೇ ಇರುವುದು ಕಂಡು ಬಂದಿರುತ್ತದೆ. ಈ ಬೃಹತ್ ಕಾಮಗಾರಿಗೆ ಪ್ರತಿದಿನ ಸರಾಸರಿ 40 ರಿಂದ 50 ಜನ ಕಾರ್ಮಿಕರು, ಯಂತ್ರೋಪಕರಣಗಳು ಅವಶ್ಯಕತೆ ಇದ್ದು, ಹಗಲು-ರಾತ್ರಿ ಕೆಲಸ ನಿರ್ವಹಿಸಬೇಕಾಗಿತ್ತು. ಆದರೆ ಗುತ್ತಿಗೆದಾರರು ಈ ಬಗ್ಗೆ ಯಾವುದೇ ಆಸಕ್ತಿ ವಹಿಸದೆ ಪಾಲಿಕೆ ಅಧಿಕಾರಿಗಳ ಸಲಹೆ, ಸೂಚನೆ, ನಿರ್ದೇಶನಗಳನ್ನು ಪಾಲಿಸದೆ ನಿರ್ಲಕ್ಷ್ಯ ತೋರಿರುತ್ತಾರೆ.

ಸದರಿ ರಸ್ತೆ ಕಾಮಗಾರಿ ವಿಳಂಬದ ಬಗ್ಗೆ ಹಾಗೂ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಪ್ರತಿನಿತ್ಯ ಆಗುತ್ತಿರುವ ತೊಂದರೆಯ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಪ್ರಕಟಣೆಯಾಗುತ್ತಿದ್ದು, ಸಾರ್ವಜನಿಕರು ಲಿಖಿತ ದೂರನ್ನು ಸಹ ನೀಡಿರುತ್ತಾರೆ.

ಇವುಗಳನ್ನೆಲ್ಲಾ ಗಮನಿಸಿದಾಗ ಸದರಿ ಗುತ್ತಿಗೆದಾರರಿಗೆ ಎಷ್ಟೇ ಕಾಲಾವಕಾಶ ಕೊಟ್ಟರೂ ಕಾಮಗಾರಿಯನ್ನು ಪೂರ್ಣಗೊಳಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಗುತ್ತಿಗೆದಾರರು ಗುತ್ತಿಗೆ ಕರಾರನ್ನು ಉಲ್ಲಂಘಿಸಿರುವುದು ಮೇಲ್ಕಂಡ ಅಂಶಗಳಿಂದ ದೃಢಪಟ್ಟಿರುತ್ತದೆ.

ಈ ಮೇರೆಗೆ ಮೈಸೂರು ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಯೋಜನೆಯ **(Ch 1.00** ಕಿ.ಮೀ. ನಿಂದ **Ch:2.00** ಕಿ.ಮೀ. ವರೆಗೆ) ಗುತ್ತಿಗೆದಾರರಾದ **M/s. Lakshmi Construction** ರವರ ಗುತ್ತಿಗೆಯನ್ನು ಟೆಂಡರ್ ನಿಯಮದಂತೆ, ಗುತ್ತಿಗೆದಾರರ **Risk and Cost** ನಲ್ಲಿ ರದ್ದುಪಡಿಸುವುದು ಸೂಕ್ತವಾಗಿದೆ. ಸದರಿ ಯೋಜನೆಯು ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಹಾಗೂ ಮುಂದಿನ ಮಳೆಗಾಲದ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ತಪ್ಪಿಸುವ ದೃಷ್ಟಿಯಿಂದ ಉಳಿಕೆ ಕಾಮಗಾರಿ ಕೆಲಸಕ್ಕೆ ಟೆಂಡರ್ ಕರೆದರೆ ವಿಳಂಬವಾಗುವುದರಿಂದ **KRIDL** ಸಂಸ್ಥೆಗೆ ವಹಿಸುವುದು ಸೂಕ್ತವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22-11-2012ರ ಟಿಪ್ಪಣಿ

1. ಸದರಿ ಮೂಲ ಗುತ್ತಿಗೆದಾರರಾದ **M/s. Lakshmi Construction** ರವರ ಗುತ್ತಿಗೆಯನ್ನು ರದ್ದುಪಡಿಸಿ ಉಳಿಕೆ ಕಾಮಗಾರಿಯನ್ನು ಸದರಿ ಗುತ್ತಿಗೆದಾರರ **Risk and Cost** ನಲ್ಲಿ ಕೈಗೊಳ್ಳಲು ಅನುಮೋದನೆ.
2. ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ಪ್ರಸಕ್ತ ಸಾಲಿನ ದರಪಟ್ಟಿ 2012-13 ರಂತೆ ತಯಾರಿಸಿರುವ ಕೆಳಕಂಡ ಎರಡು ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ.

..........3

ಅ) ಮೈಸೂರು ರಸ್ತೆಯ ಸರಪಳಿ 1.00 ಕಿ.ಮೀ. ನಿಂದ ಸರಪಳಿ 1.50 ಕಿ.ಮೀ.ನ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ ಅಂದಾಜು ಮೊತ್ತ ರೂ.340.00 ಲಕ್ಷಗಳು

ಆ) ಮೈಸೂರು ರಸ್ತೆಯ ಸರಪಳಿ 1.50 ಕಿ.ಮೀ. ನಿಂದ ಸರಪಳಿ 2.00 ಕಿ.ಮೀ.ನ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ ಅಂದಾಜು ಮೊತ್ತ ರೂ.440.00 ಲಕ್ಷಗಳು.

3. ಸದರಿ ಕಾಮಗಾರಿಯನ್ನು ಟೆಂಡರ್ ಕರೆದು ನಿರ್ವಹಿಸುವುದು ವಿಳಂಬವಾಗುವ ಪ್ರಯುಕ್ತ **KRIDL** ಸಂಸ್ಥೆಯಿಂದ ಕಾಮಗಾರಿ ನಿರ್ವಹಿಸಲು ಅನುಮೋದನೆ.

4. **M/s. Lakshmi Construction** ಗುತ್ತಿಗೆದಾರರ ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಹಾಗೂ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳಲು ವಿಫಲರಾದ ಪ್ರಯುಕ್ತ, ಟೆಂಡರ್ ನಿಯಮಾವಳಿಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವುದರಿಂದ, ಪಾಲಿಕೆಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದ ಹಿನ್ನಲೆಯಲ್ಲಿ ಸದರಿ ಗುತ್ತಿಗೆದಾರರನ್ನು ಮುಂದಿನ ಎರಡು ವರ್ಷಗಳಲ್ಲಿ ಪಾಲಿಕೆಯ ಯಾವುದೇ ಟೆಂಡರ್‌ಗಳಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರಲು ಅನುಮೋದನೆ

ಹಾಗೂ ಕಡತವನ್ನು ಪರಿಶೀಲಿಸಲಾಯಿತು. ಸದರಿ ಯೋಜನೆಗೆ ತಡೆಯಿದ್ದಂತಹ ಅಗತ್ಯ ಉಪಯುಕ್ತತೆಗಳನ್ನು **(Utility Shifting)** ಸಕಾಲದಲ್ಲಿ ಸ್ಥಳಾಂತರಿಸದೇ ಇರುವುದು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬ, ರಸ್ತೆಬದಿ ಮರಗಳನ್ನು ತೆರವು ಮಾಡುವ ಕಾರ್ಯದಲ್ಲಿ ವಿಳಂಬವಾದ ಕಾರಣ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುತ್ತದೆ. ಗುತ್ತಿಗೆದಾರರು ಮನವಿಯನ್ನು ಸಲ್ಲಿಸಿ ದಿನಾಂಕ:30-04-2013 ರೊಳಗಾಗಿ ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸುವುದಾಗಿ ಕೋರಿರುವ ಮೇರೆಗೆ, ಮೇಲ್ಕಂಡ ಕಾರಣಗಳಿಂದ ವಿಳಂಬವಾಗಿರುವುದನ್ನು ಪರಿಗಣಿಸಿ, ಹಾಲಿ ಗುತ್ತಿಗೆದಾರರನ್ನೇ ಮುಂದುವರಿಸಿ ಕಾಮಗಾರಿಯನ್ನು ಕಡ್ಡಾಯವಾಗಿ ದಿನಾಂಕ:30-04-2013 ರೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:09-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:09-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 09-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (404) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು-5, ಕೆರೆಗಳು ರವರು ಮೊದಲನೇ ಕೆರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ ಏಕೈಕ ಟೆಂಡರ್ ಸ್ವೀಕೃತವಾಗಿದ್ದು, ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು-5, ಕೆರೆಗಳುರವರು ಏಕ ಟೆಂಡರ್‌ದಾರರಾದ ಶ್ರೀ. ಜೆ.ಸಿ.ಪ್ರಕಾಶ್ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.300.00 ಲಕ್ಷಗಳ ಅಂದಾಜುಪಟ್ಟಿಗೆ 2011-12ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.2,99,99,648.18 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ ರೂ.2,93,40,076.00 ಗಳನ್ನು ಅನುಮೋದಿತ 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡಾ 2.20% ರಷ್ಟು ಕಡಿಮೆ ಮತ್ತು 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ 4.31% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಕೆರೆಗಳು) ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.2,93,40,076.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್‌ಎನ್‌ವೈ/2007 (ಭಾ) ದಿನಾಂಕ:11-05-2009ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010 ಬೆಂಗಳೂರು ದಿನಾಂಕ:02-04-2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 2.2 ರಷ್ಟು ಕಡಿಮೆ ದರಗಳು ಹಾಗೂ 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ 4.31% ರಷ್ಟು ಕಡಿಮೆ ದರಗಳು ಅಥವಾ ರೂ.2,93,40,076.00 (ರೂಪಾಯಿ ಎರಡು ಕೋಟಿ ತೊಂಭತ್ಮೂರು ಲಕ್ಷದ ನಲವತ್ತು ಸಾವಿರದ ಎಪ್ಪತ್ತಾರು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:06-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:07-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:07–02–2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:07–02–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (405) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಶ್ರೀ. ಗಾಳಿ ಆಂಜನೇಯ ದೇವಸ್ಥಾನದ ಪಕ್ಕದಲ್ಲಿ ಮೇಲು ಸೇತುವೆ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ **M/s. NPCC Ltd.,** ರವರಿಗೆ ರೂ.18.3 ಕೋಟಿಗಳ ಅಂದಾಜಿನ ಮೇಲೆ ಶೇ.13.72ರ ಹೆಚ್ಚುವರಿ ಟೆಂಡರ್ ಪ್ರೀಮಿಯಂನೊಂದಿಗೆ ರೂ.20.83 ಕೋಟಿಗಳಿಗೆ ಕರಾರು ಪತ್ರದ ಮೂಲಕ ವಹಿಸಿಕೊಡಲಾಗಿತ್ತು.

ಟೆಂಡರ್ ಕರೆದಾಗ ಪ್ರಸ್ತಾವನೆಯಲ್ಲಿ ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ ಮೈಸೂರು ರಸ್ತೆವರೆಗೆ ಪರಿಮಾಣಗಳನ್ನು ಅಳವಡಿಸಿಕೊಂಡಿದ್ದು, ಇದರಲ್ಲಿ **Foundantion** ಗಳಿಗಾಗಿ **Piles** ಹಾಕುವ ಪ್ರಸ್ತಾವನೆ ಇದ್ದು, **Foundantion** ಗಳ ಬದಲಾಗಿ **Open Foundation** ಗಳನ್ನು ಹಾಗೂ ಮೈಸೂರು ರಸ್ತೆ ಎರಡು ರ್‍ಯಾಂಪ್‌ಗಳನ್ನು ಅಳವಡಿಸುವುದರೊಂದಿಗೆ ರೂ.4.94 ಕೋಟಿಗಳ ಹೆಚ್ಚುವರಿ ಆರ್ಥಿಕ ಇಂಗಿತಕ್ಕೆ ಅನುಮೋದನೆಯೊಂದಿಗೆ ರೂ. 25.77 ಕೋಟಿಗಳ ಒಟ್ಟು **Value of work** ಗೆ ಅನುಮೋದನೆ ಪಡೆದುಕೊಳ್ಳಲಾಯಿತು.

ಕಾಮಗಾರಿ ಪ್ರಗತಿ ಸಂದರ್ಭದಲ್ಲಿ ವೆಸ್ಟ್ ಆಫ್ ಕಾರ್ಡ್ ರಸ್ತೆ ಭಾಗದ ಕೆಲವು ಕಟ್ಟಡಗಳನ್ನು ತೆರವುಗೊಳಿಸುವ ಪ್ರಕ್ರಿಯೆಯು ಬಾಕಿ ಇದ್ದು, 25-05-2011 ರಂದು ವೆಸ್ಟ್ ಆಫ್ ಕಾರ್ಡ್‌ನ ಕಾಮಗಾರಿ ಸ್ಥಳವನ್ನು ಉಪ ಆಯುಕ್ತರು (ಆಸ್ತಿಗಳು) ರವರಿಂದ ಭೂ ಸ್ವಾಧೀನವನ್ನು ತೆಗೆದುಕೊಂಡ ನಂತರ ಕಟ್ಟಡಗಳನ್ನು ನೆಲಸಮ ಮಾಡಿ ತೆರವುಗೊಳಿಸಿ ದಿನಾಂಕ:21-06-2011 ರಂದು ಗುತ್ತಿಗೆದಾರರಿಗೆ ಸ್ಥಳವನ್ನು ಕಾಮಗಾರಿ ನಡೆಸಲು ನೀಡಲಾಗಿತ್ತು. ತದನಂತರ ಪ್ರಧಾನ ಅಭಿಯಂತರರು ದಿನಾಂಕ:24-05-2011ರ ಪರಾಮರ್ಶೆ ಸಭೆಯಲ್ಲಿ ಗುತ್ತಿಗೆದಾರರಿಗೆ ವೆಸ್ಟ್ ಆಫ್ ಕಾರ್ಡ್‌ನ ಭೂಸ್ವಾಧೀನ ಪ್ರಕ್ರಿಯೆ ನಂತರದ ವೆಸ್ಟ್ ಆಫ್ ಕಾರ್ಡ್‌ನ ಕಾಮಗಾರಿಗೆ **Current SR** ದರಗಳನ್ನು ನೀಡುವಂತೆ ವಿನಂತಿಸಿಕೊಂಡಿದ್ದು, ಇದಕ್ಕೆ ಸಮ್ಮತಿ ಸೂಚಿಸಿದ ನಂತರ ಈ ಬದಲಾವಣೆಗಳಿಂದ ಉದ್ಭವಿಸಿದ **quality variation** ಗೆ ಮಾನ್ಯ ಆಯುಕ್ತರು ದಿನಾಂಕ:04-01-2012 ರಲ್ಲಿ ಅನುಮೋದಿಸಿರುತ್ತಾರೆ.

ಕಾಮಗಾರಿಯ ಅಂತಿಮ ಹಂತವು ಪ್ರಗತಿಯಲ್ಲಿರುವಾಗ ಅಂದಿನ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಪೂಜ್ಯ ಮಹಾಪೌರರು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಶಾಸಕರು, ಪಾಲಿಕೆ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಏಪ್ರಿಲ್ 2011 ರಂದು ಬಂದ ಭಾರಿ ಮಳೆಯಿಂದ ಆಂಜನೇಯ ಸ್ವಾಮಿ ದೇವಸ್ಥಾನ ಮತ್ತು ಸುತ್ತಮುತ್ತಲಿನ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಸಾರ್ವಜನಿಕರಿಗೆ ತೊಂದರೆಯಾದ ಕಾರಣದಿಂದ ಹಾಲಿ ಉದ್ದೇಶಿಸಿದ ಸೇತುವೆಯ ಎತ್ತರವನ್ನು ಒಂದು ಮೀಟರ್‌ಗೆ ಎತ್ತರ ಮಾಡಿ ಮೈಸೂರು ರಸ್ತೆಗೆ ಸೇರಿಸುವಂತೆ ಸ್ಥಳದಲ್ಲಿಯೇ ಆಯುಕ್ತರವರು ಮೌಖಿಕ ಆದೇಶ ನೀಡಿರುತ್ತಾರೆ. ಆ ಆದೇಶದನ್ವಯ ತಾಂತ್ರಿಕ ಸಲಹೆಗಾರರು ದಿನಾಂಕ:23-04-2011 ರಂದು ಸ್ಥಳಕ್ಕೆ ಭೇಟಿ ನೀಡಿ ಅವರ ಅಭಿಪ್ರಾಯ ಸೂಚಿಸಿ ಸೇತುವೆಯನ್ನು ರಸ್ತೆಯಿಂದ ಒಂದು ಮೀಟರ್ ಎತ್ತರಕ್ಕೆ ನಿರ್ಮಾಣ ಮಾಡಲು ತಿಳಿಸಿರುತ್ತಾರೆ.

ಸನ್ಮಾನ್ಯ ಮುಖ್ಯಮಂತ್ರಿಗಳು ಸದರಿ ಸ್ಥಳಕ್ಕೆ ಮೂರು ಬಾರಿ ಭೇಟಿ ನೀಡಿ ಈ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಆದೇಶ ನೀಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದೇಶಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ಟೆಂಡರ್ ಸಾಮಾನ್ಯ ಕರಾರು ಸಹ ಈ ಗುತ್ತಿಗೆದರರ ಟೆಂಡರ್ ಕರಾರಿನ ಭಾಗವಾಗಿರುತ್ತದೆ. ಮೇಲ್ಕಂಡ ಕರಾರು ಪುಸ್ತಕದ ಪುಟದ ಸಂಖ್ಯೆ 51ರ 13ನೇ (2) ಕಾಲಂ ಪ್ರಕಾರ ಬದಲಾದ **Design and Scope of work, Altered work** ಗಳಿಗೆ ಪ್ರಸ್ತುತ

..........2

ಚಾಲ್ತಿಯಲ್ಲಿರುವ **PWD** ದರಪಟ್ಟಿ ಹಾಗೂ ರಾಷ್ಟ್ರೀಯ ಹೆದ್ದಾರಿ ದರಪಟ್ಟಿ, 2010-11ರ ದರಪಟ್ಟಿಗಳನ್ನು ಅಳವಡಿಸಿಕೊಂಡು ಪರಿಷ್ಕೃತ **Variation in quantities-II** ನ್ನು ರೂ.28.52 ಕೋಟಿಗಳಿಗೆ **P.M.C** ಸಮಾಲೋಚಕರಾದ ಮೆ॥ ಸ್ಟುಪ್ ಕನ್ಸಲ್ಟೆಂಟ್ ರವರು ತಯಾರಿಸಿದ್ದು, ಇದರ ಜೊತೆ ಲಗತ್ತಿಸಿರುವ **Work slip -** ಸಂಖ್ಯೆ 5 ಹಾಗೂ **E.I.R.L** ಮೊತ್ತ ರೂ.274.62 ಲಕ್ಷಗಳು ಆಗಿರುತ್ತದೆ.

ಬದಲಾದ ಕಾಮಗಾರಿ ವಿನ್ಯಾಸ ಹಾಗೂ ವಿಶಿಷ್ಟ ವಿವರಣೆಗಳನ್ನು ಒಳಗೊಂಡ ಮೈಸೂರು ಕಾಮಗಾರಿಯ **Work slip-5** ಹಾಗೂ **E.I.R.L** ಅನುಮೋದನೆಯನ್ನು ನಿರೀಕ್ಷಿಸಿ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈ ಕಾಮಗಾರಿಗಳಿಗೆ ಈಗಾಗಲೇ ಮೂಲ ಮಂಜೂರಾತಿ ಟೆಂಡರ್ ದರದಂತೆ **RA Bill No.18, 19, 20 & 21** ನೇ ಚಾಲ್ತಿ ಬಿಲ್ಲಿನಲ್ಲಿ ಹಣ ಪಾವತಿಸಲಾಗಿದ್ದು, ಹಾಲಿ ಉದ್ದೇಶಿಸಿರುವ **Work slip-5** ಹಾಗೂ **E.I.R.L** ಸಕ್ಷಮ ಪ್ರಾಧಿಕಾರದಿಂದ (ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆ ನಿರ್ಣಯಗಳಂತೆ) ಮಂಜೂರಾತಿ ದೊರೆತ ನಂತರ ಹೊಸ ದರಗಳ ವ್ಯತ್ಯಾಸದ ಮೊತ್ತವನ್ನು ಮೇಲ್ಕಂಡ ಚಾಲ್ತಿ ಬಿಲ್ಲುಗಳಲ್ಲಿ ಅಳವಡಿಸಿಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸಲು ಉದ್ದೇಶಿಸಲಾಗಿದೆ.

ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಸಾರ್ವಜನಿಕರ ಉಪಯೋಗಕ್ಕಾಗಿ ರಸ್ತೆಯನ್ನು ಸಂಚಾರ ದಟ್ಟಣೆಯಿಂದ ಪೂರ್ಣಗೊಳಿಸಲು ದಿನಾಂಕ:28-02-2013ರ ಒಳಗಾಗಿ ಉಳಿದ ಎಲ್ಲಾ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

**Revision of rates (Excluding towards Mysore road Approach ramp and junction)** ಗಳ ಅನುಮೋದನೆಗೆ ಬದಲಾವಣೆಯಾದ ಕಾಮಗಾರಿಗೆ ಮೇಲೆ ಸೂಚಿಸಿದಂತೆ ಪ್ರಸ್ತು ಚಾಲ್ತಿಯಲ್ಲಿರುವ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ದರಪಟ್ಟಿ 2011-12ರ ದರಪಟ್ಟಿಗಳನ್ನು ಅಳವಡಿಸಿಕೊಂಡು ಹಣ ಪಾವತಿಸಲು ಮುಖ್ಯ ಲೆಕ್ಕಪರಿಶೋಧಕರು ರವರ ಅಭಿಪ್ರಾಯಗಳನ್ನು ಪರಿಗಣಿಸುವ ಷರತ್ತಿನೊಂದಿಗೆ ವರ್ಕ್ ಸ್ಲಿಪ್-5 ಹಾಗೂ ಇ.ಐ.ಆರ್.ಎಲ್ ಮೊತ್ತ ರೂ. 274.62 ಲಕ್ಷ (ಇನ್ನೂರ ಎಪ್ಪತ್ತನಾಲ್ಕು ಪಾಯಿಂಟ್ ಆರು ಎರಡು ಲಕ್ಷ) ಗಳಿಗೆ ಅನುಮೋದನೆ ಹಾಗೂ ಮಂಜೂರಾತಿ ದೊರೆತ ನಂತರ 18, 19, 20, 21 ಮತ್ತು ನಂತರದ ಚಾಲ್ತಿ ಬಿಲ್ಲುಗಳಲ್ಲಿ ಮಂಜೂರಾತಿ ದೊರೆತ ನಂತರ ವ್ಯತ್ಯಾಸದ ಮೊತ್ತವನ್ನು ಅಳವಡಿಸಿಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಕಾಮಗಾರಿ ನಿರ್ವಹಣೆಯಲ್ಲಿ ಉಂಟಾಗಿರುವ ಬದಲಾವಣೆಗೆ ಅನುಗುಣವಾಗಿ ತಯಾರಿಸಿರುವ ವರ್ಕ್ ಸ್ಲಿಪ್-5 ಹಾಗೂ ಇ.ಐ.ಆರ್.ಎಲ್ ಮೊತ್ತ ರೂ.274.62 ಲಕ್ಷ (ಇನ್ನೂರ ಎಪ್ಪತ್ನಾಲ್ಕು ಪಾಯಿಂಟ್ ಆರು ಎರಡು ಲಕ್ಷಗಳು) ಆಗಿದ್ದು, ಒಟ್ಟಾರೆ ಮೇಲ್ಕಂಡ ಕಾಮಗಾರಿ ವೆಚ್ಚ 2852 ಲಕ್ಷಗಳಾಗುತ್ತದೆ. ಈ ಕಾಮಗಾರಿಗೆ ಈಗಾಗಲೇ ಜೆ.ಎನ್.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ ಸಮಗ್ರ ಯೋಜನಾ ವರದಿಯಲ್ಲಿ ರೂ.3060 ಲಕ್ಷಗಳು ಮಂಜೂರಾತಿ ದೊರೆತಿರುತ್ತದೆ. ಉದ್ದೇಶಿತ 5ನೇ ವರ್ಕ್ ಸ್ಲಿಪ್ ಹಾಗೂ ಇ.ಐ.ಆರ್.ಎಲ್ ಮೊತ್ತಗಳನ್ನು ಒಳಗೊಂಡಂತೆ ಕಾಮಗಾರಿಯ ಒಟ್ಟಾರೆ ಮೊತ್ತ ರೂ.2852 ಲಕ್ಷಗಳಾಗಿರುವುದರಿಂದ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ.

ಮೇಲ್ಕಂಡಂತೆ ವಿವರಿಸಿರುವ ಕಾರಣಗಳಿಗಾಗಿ ಪ್ರಸ್ತಾಪಿತ ಕಾಮಗಾರಿಯ ವರ್ಕ್ ಸ್ಲಿಪ್-5 ಹಾಗೂ ಇ.ಐ.ಆರ್.ಎಲ್. ಮೊತ್ತ ರೂ.274.62 ಲಕ್ಷ (ಇನ್ನೂರ ಎಪ್ಪತ್ತನಾಲ್ಕು ಪಾಯಿಂಟ್ ಆರು ಎರಡು ಲಕ್ಷಗಳು) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:04-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:04-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 04-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (406) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ದಕ್ಷಿಣ) ವಲಯದ ವ್ಯಾಪ್ತಿಗೆ ಬರುವ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ವಿಭಾಗದಿಂದ ರೂ. 85.00 ಲಕ್ಷಗಳ ಅಂದಾಜು ಮೊತ್ತದಲ್ಲಿ **Proposed construction of Bangalore one centre building covering slab for drain and improvements to drain around the park at KSRTC layout Padmanabhanagar constituency in ward No:182** ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ 2011-12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ2221 **Development of stadium and playground at KSRTC layout and JP Nagar** ರ ಅಡಿಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ರೂ. 85.00 ಲಕ್ಷಗಳಿಗೆ ಕಾಮಗಾರಿ ಸಂಕೇತ ಪಡೆಯಲಾಗಿದ್ದು, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಇ-ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಗುತ್ತಿಗೆದಾರರ ಮೊತ್ತ (ಹೆಸರು) | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | 2012-13ನೇ ಸಾಲಿನ ಎಸ್.ಆರ್.ದರ ಗಳಿಗೆ ಹೋಲಿಸಿದಾಗ | ನಮೂದಿಸಿರುವ ಮೊತ್ತ (ರೂ.ಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇಕಡ ವಾರು | ಸಂಧಾನ ನಂತರ ಮತ್ತು ಶೇಕಡವಾರು |
|---|---|---|---|---|---|---|
| 1 | ಶ್ರೀ.ಜಿ.ಎನ್.ಪ್ರಸನ್ನ | 83,74,491.28 | 88,15,453.83 | 1,17,64,866.60 | 40.48% ಹೆಚ್ಚು<br>33.46% ಹೆಚ್ಚು | ರೂ.1,01,36,591<br>21.04% ಹೆಚ್ಚು<br>14.99% ಹೆಚ್ಚು |
| 2 | ಶ್ರೀ.ಡಿ.ಜಿ.ಜಗದೀಶ್ | | | 1,20,50,355.00 | 43.89% ಹೆಚ್ಚು<br>36.70% ಹೆಚ್ಚು | |

ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಜಿ.ಎನ್.ಪ್ರಸನ್ನ ರವರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 1,01,36,591-00 ಗಳನ್ನು 2011-12ನೇ ಸಾಲಿನ ಮಂಜೂರಾದ ದರಗಳಿಗೆ ಹೋಲಿಸಿದಾಗ ಶೇಕಡ 21.04% ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ 2012-13ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 14.99ರಷ್ಟು ಹೆಚ್ಚುವರಿಯಾಗಿದ್ದು, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:**13-02-2013**ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಪಾಲಿಕೆ ಸಭೆಯ ತೀರ್ಮಾನಕ್ಕೆ ಮಂಡಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-02-2013 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 18-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 29 (407) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವಿಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 133, ಹಂಪಿನಗರದ ಬಾಪೂಜಿನಗರದ ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನವು ತಗ್ಗು ಪ್ರದೇಶದಲ್ಲಿದ್ದು, ಹಾಲಿಯಿರುವ ಬೃಹತ್ ಮಳೆ ನೀರುಗಾಲುವೆಯು ಹೂಳಿನಿಂದ ತುಂಬಿದ್ದು, ಮಳೆಗಾಲದಲ್ಲಿ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ, ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸುವ ಕಾಮಗಾರಿಗೆ **(Providing bed protection for primary storm water drain V-100from Ch: 8090.0m to 8760.0m from Sri Gali Anjaneya swami temple to KAVIKA Bridge.)** ಅಂದಾಜು ಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.488.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗೆ ಈಗಾಗಲೇ ಒಂದು ಬಾರಿ **E-Procurement portal** ನಲ್ಲಿ, **Two cover system** ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಆದರೆ **Single tender** ಆದ್ದರಿಂದ ಟೆಂಡರ್‌ಅನ್ನು ತಿರಸ್ಕರಿಸಲಾಗಿತ್ತು, ದಿನಾಂಕ: 27-06-2012ರಂದು ಎರಡನೇ ಬಾರಿಗೆ **E-Procurement portal** ನಲ್ಲಿ, **Two cover system** ನಲ್ಲಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿ ಸದರಿ ಟೆಂಡರ್‌ನಲ್ಲಿ ಮೂವರು ಗುತ್ತಿಗೆದಾರರು ಭಾಗವಹಿಸಿ ಸಿಂಧುತ್ವ ಹೊಂದಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್ ಅನ್ನು ದಿನಾಂಕ:16-07-2012ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹರಾದ ಹಿನ್ನಲೆಯಲ್ಲಿ ಮುಖ್ಯ ಅಭಿಯಂತರರು ಅನುಮೋದನೆ ನೀಡಿದ ನಂತರ ಆರ್ಥಿಕ ಬಿಡ್ಡನ್ನು ದಿನಾಂಕ: 19-07-2012ರಂದು ತೆರೆಯಲಾಗಿದ್ದು, ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು ಕಡಿಮೆ ದರಗಳನ್ನು ನಮೂದಿಸಿ L1 ಆಗಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.4,87,42,600.50 |
| 2 | ಬಿಡ್ಡುದಾರರಾದ ಶ್ರೀ. ಜೆ.ಸಿ.ಪ್ರಕಾಶ್ ನಮೂದಿಸಿರುವ ಟೆಂಡರ್ ಮೊತ್ತ | ರೂ.4,99,84,290.00 |
| 3 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ | 2.55 ಹೆಚ್ಚುವರಿ |
| 4 | **First quarter issue rate of steel and cement** ದರಗಳಿಗೆ ಹೋಲಿಸಿದಾಗ **(Order No:8772, dated: 29-02-2012)** ಶೇಕಡವಾರು ಕಡಿಮೆ | 3.99 ಕಡಿಮೆ |

ಶ್ರೀ.ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 2.55ರಷ್ಟು ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ (First quarter ) ಉಕ್ಕಿನ ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇಕಡ 3.99ರಷ್ಟು ಕಡಿಮೆಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಜೆ.ಸಿ.ಪ್ರಕಾಶ್, ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ. 4,99,84,290.00 ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:** 20-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-02-2013 ರ ನಿರ್ಣಯ.

.......................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:18-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 18-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (408) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:155, ಗವೀಪುರ ಗುಟ್ಟಳ್ಳಿ, ನಗರಪಾಲಿಕೆ ಸಮುದಾಯದ ಭವನದಲ್ಲಿನ ತಳಮಹಡಿ ಕಟ್ಟಡದ ವಿಸ್ತೀರ್ಣ 6500 ಚದರ ಅಡಿ ಹಾಗೂ ಪೂರ್ವ ಭಾಗದ ಖಾಲಿ ನಿವೇಶನ 13,885 ಚ.ಅಡಿಗಳನ್ನು ಅದಮ್ಯ ಚೇತನ ಫೌಂಡೇಷನ್ ರವರಿಗೆ "ಅನ್ನಪೂರ್ಣ ಯೋಜನೆ" ಅಡಿ 261 ಸರ್ಕಾರಿ ಶಾಲೆಯ 72,000 ಶಾಲಾ ಮಕ್ಕಳಿಗೆ ಬಿಸಿಯೂಟ ತಯಾರಿಸಿ, ಉಚಿತವಾಗಿ ಶಾಲೆಗಳಿಗೆ ನೀಡಲಾಗುತ್ತಿರುತ್ತದೆ. 2004 ರಿಂದ 5-ವರ್ಷದ ಅವಧಿಗೆ ಉಚಿತವಾಗಿ ಈ ಕಟ್ಟಡವನ್ನು ನೀಡಿದ್ದು, ಅವಧಿ ಮುಗಿದ ನಂತರ, ದಿನಾಂಕ: 25-05-2009 ರಿಂದ 5 ವರ್ಷದ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.1000/- ನಿಗಧಿಪಡಿಸಿ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:24-05-2014ಕ್ಕೆ ಮುಗಿಯುವುದಾಗಿರುತ್ತದೆ.

ಈ ಮಧ್ಯೆ ಅದಮ್ಯ ಚೇತನ ಫೌಂಡೇಷನ್‌ರವರು ಪತ್ರ ಬರೆದು, ಈ ಪಾಲಿಕೆ ಕಟ್ಟಡವನ್ನು ಬಿಸಿಯೂಟ ಯೋಜನೆಗೆ ಉಪಯೋಗಿಸುತ್ತಿದ್ದು, ಕಟ್ಟಡದ ನವೀಕರಣ ಹಾಗೂ ಸುಸ್ಥಿತಿಗೆ 5 ವರ್ಷಗಳಲ್ಲಿ 60-70 ಲಕ್ಷದವರೆಗೆ ಖರ್ಚು ಮಾಡಲಾಗಿದ್ದು, ತಾವು ಈ ಕಟ್ಟಡಕ್ಕೆ ನಿಗಧಿಪಡಿಸಿರುವ ಗುತ್ತಿಗೆ ಹಣಕ್ಕೆ ವಿನಾಯಿತಿ ನೀಡಿ, 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ.

ಈ ಸಂಬಂಧ ಪಾಲಿಕೆಯ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯು ಮುಂದಿನ 30 ವರ್ಷಗಳಿಗೆ ಗುತ್ತಿಗೆ ನವೀಕರಣ ನೀಡುವುದೆಂದು ತೀರ್ಮಾನಿಸಿದ್ದು, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಪ್ರಸ್ತಾಪಿಸಲಾಗಿತ್ತು. ಮಾನ್ಯ ಸರ್ಕಾರವು ಈ ಪ್ರಸ್ತಾವನೆಗೆ ತನ್ನ ದಿನಾಂಕ:28-09-2012ರಲ್ಲಿ ಗುತ್ತಿಗೆ ಅವಧಿಯು 2014ಕ್ಕೆ ಮುಕ್ತಾಯವಾಗಲಿದ್ದು, ಅವಧಿ ಮುಗಿದ ನಂತರ ಪ್ರಸ್ತಾವನೆ ಪರಿಶೀಲಿಸಲಾಗುವುದೆಂದು ಆದೇಶಿಸಿರುತ್ತದೆ.

ಅಧ್ಯಕ್ಷರು, ಅದಮ್ಯ ಚೇತನರವರು ಸದರಿ ಸ್ಥಳದಲ್ಲಿ ಸಂಸ್ಥೆಯ ಚಟುವಟಿಕೆಯಾದ ಮಹಿಳೆಯರಿಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ವಿವಿಧ ಚಟುವಟಿಕೆ, ಉದ್ಯೋಗ ತರಬೇತಿ, ಆಟ-ಪಾಠ, ಸಂಚಾರಿ ಶಿಕ್ಷಣ ಸೌಲಭ್ಯ, ಅನ್ನಪೂರ್ಣ ಯೋಜನೆ, ಆರೋಗ್ಯ ಚೇತನ ಚಟುವಟಿಕೆ ನಡೆಸುತ್ತಿದ್ದು ಹಾಗೂ ಬೊಂಬೆ ಪ್ರದರ್ಶನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನ ಮಂಜೂರಾತಿ ನೀಡಲು ಆಶ್ವಾಸನೆ ನೀಡಿರುತ್ತದೆ. ಈ ಅಂಶಗಳನ್ನು ಪರಿಶೀಲಿಸಿ ಸದರಿ ಸ್ಥಳವನ್ನು ಮುಂದಿನ 30 ವರ್ಷಗಳಿಗೆ ಗುತ್ತಿಗೆ ಅವಧಿ ಮುಂದುವರೆಸಲು ಕೋರಿರುತ್ತಾರೆ. ಆದುದರಿಂದ, ಈ ಪ್ರಸ್ತಾವನೆಯನ್ನು ಸೂಕ್ತ ನಿರ್ಣಯ ಕೋರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 05-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ, ಮುಂದಿನ ಮೂವತ್ತು ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಲು ಒಪ್ಪುತ್ತಾ, ಸರ್ಕಾರದ ಅಂತಿಮ ಆದೇಶಕ್ಕೆ ಬದ್ಧರಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.......................2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 22-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (409)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-154, ಬಸವನಗುಡಿ, 1ನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ, ಅಂಗಡಿ ಬೀದಿ ಮಧ್ಯೆ ಇರುವ 130x60 ಅಡಿಗಳ ಸ್ವತ್ತನ್ನು ದೇಶಿಯ ವ್ಯಾಯಾಮ ಶಾಲೆಯವರಿಗೆ ದಿ:01-02-1951 ರಿಂದ 40 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ತದನಂತರ, ದಿನಾಂಕ:10-02-1991 ರಿಂದ ಮತ್ತೆ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲಾಗಿದ್ದು, ದಿನಾಂಕ: 09-02-2021ಕ್ಕೆ ಅವಧಿ ಮುಗಿಯಲಿರುತ್ತದೆ. ಈ ಸ್ವತ್ತಿಗೆ ಮಾಸಿಕ ರೂ.240/- ಗಳನ್ನು ನಿಗಧಿಪಡಿಸಲಾಗಿದ್ದು, ಗುತ್ತಿಗೆ ಕರಾರಿನಲ್ಲಿ ದೈಹಿಕ ಶಿಕ್ಷಣಕ್ಕೆ ಮಾತ್ರ ಬಳಸಬೇಕೆಂಬ ಷರತ್ತಿರುತ್ತದೆ.

ಸದರಿ ಸ್ಥಳ ಪರಿಶೀಲನೆ ಮಾಡಲಾಗಿದ್ದು, ಗುತ್ತಿಗೆದಾರರು ಸದರಿ ಜಾಗವನ್ನು ಮರು ಗುತ್ತಿಗೆಗೆ ನೀಡಿರುತ್ತಾರೆಂದು ತಿಳಿಸಿ, ಸದರಿ ಸ್ವತ್ತನ್ನು ನಗರಪಾಲಿಕೆ ವಶಕ್ಕೆ ಪಡೆಯಲು ಕೆ.ಪಿ.ಪಿ. ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸೂಚಿಸಲಾಗಿ, ದಿನಾಂಕ:17-03-2011 ರಲ್ಲಿ ಕೆ.ಪಿ.ಪಿ ಕಾಯ್ದೆ-1974 ಕಲಂ-9(1)ರ ಪ್ರಕಾರ ಹಾಗೂ ದಿ:28-03-2011 ರಂದು ಕೆ.ಪಿ.ಪಿ. ಕಾಯ್ದೆ-1974ರ ಕಲಂ-5ರಂತೆ ನೋಟೀಸ್ ಜಾರಿ ಮಾಡಿ ಕಟ್ಟಡವನ್ನು ತೆರವುಗೊಳಿಸಿ, ನಗರ ಪಾಲಿಕೆ ವಶಕ್ಕೆ ನೀಡಲು ಆದೇಶಿಸಲಾಗಿರುತ್ತದೆ.

ಆದರೆ, ಸಂಸ್ಥೆಯವರು ಸದರಿ ಆದೇಶದ ವಿರುದ್ಧ ಸಿಟಿ ಸಿವಿಲ್ ಸೇಷನ್ ಜಡ್ಜ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ದಾವೆಯಲ್ಲಿ ಮಹಾನಗರ ಪಾಲಿಕೆಯಿಂದ ದಿನಾಂಕ:28-03-2011 ರಂದು ನೀಡಿರುವ ನೋಟೀಸನ್ನು "Set aside" ಮಾಡಿರುತ್ತಾರೆ. ಸದರಿ ವಿಷಯದಲ್ಲಿ ಈಗಾಗಲೇ ಕೆ.ಪಿ.ಪಿ. ಕಾಯ್ದೆಯಡಿಯಲ್ಲಿ ವಿಚಾರಣೆ ನಡೆಯುತ್ತಿದ್ದು, ಅಂತಿಮ ಹಂತದಲ್ಲಿರುತ್ತದೆ.

ಈಗ ಗುತ್ತಿಗೆದಾರರು ದಿ:04-01-2013ರಂದು ಪತ್ರ ಬರೆದು ಸದರಿ ಸ್ಥಳದಲ್ಲಿ ಬಸ್ ಬೇ ನಿರ್ಮಿಸುವುದಾಗಿ ಸ್ಥಳೀಯ ಪಾಲಿಕೆ ಸದಸ್ಯರು ತಿಳಿಸಿದ್ದರಿಂದ ಆ ಜಾಗ ಬಿಟ್ಟುಕೊಡುವುದಾಗಿ, ಆದರೆ, ಬಸ್ ಬೇ ಮೇಲಿನ 1ನೇ ಅಂತಸ್ತಿನಲ್ಲಿ 3000 ಚದರ ಅಡಿಗಳ ಜಾಗವನ್ನು ವ್ಯಾಯಾಮ ಶಾಲೆ ನಡೆಸಲು ಕಟ್ಟಡ ಕಟ್ಟಿಕೊಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸ್ಥಳೀಯ ಪಾಲಿಕೆ ಸದಸ್ಯರ ಕೋರಿಕೆ ಹಾಗೂ ಸಂಸ್ಥೆಯವರ ಮನವಿಯ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿ ಸ್ಥಳದಲ್ಲಿ ಬಸ್‌ಬೇ ನಿರ್ಮಿಸಲು ತೀರ್ಮಾನಿಸಿ, ಮೊದಲನೆಯ ಅಂತಸ್ತಿನಲ್ಲಿ ಮೂರು ಸಾವಿರ ಚ.ಅಡಿಗೆ ಬದಲಾಗಿ ಸಾವಿರ ಚ.ಅಡಿಯಲ್ಲಿ ವ್ಯಾಯಾಮ ಶಾಲೆ ನಡಸುವುದಕ್ಕೆ ಅವಕಾಶ ಕಲ್ಪಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.......................2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 03 (410) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕ ವಿಷಯದ ಸಂಖ್ಯೆ:195/2010-11 ರಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಕೆಗೆ ಪ್ರತಿ ಮೀಟರ್‌ಗೆ ಕೇಬಲ್ ಅಳವಡಿಸಲು ಆರಂಭಿಕ ವೆಚ್ಚ ರೂ.135/- ರಿಂದ ಪ್ರತಿ ಮೀಟರ್‌ಗೆ ರೂ.300/-ಗೆ ಹೆಚ್ಚಿಸಿ ದರವನ್ನು ನಿಗಧಿಪಡಿಸಲಾಗಿರುತ್ತದೆ.

ದಿನಾಂಕ:11-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:152/2012-13 ರಲ್ಲಿ ಕೆಳಕಂಡಂತೆ ನಿರ್ಣಯ ಮಾಡಲಾಗಿರುತ್ತದೆ.

***"ಓ.ಎಫ್.ಸಿ. ಕೇಬಲ್‌ಗೆ ಸಂಬಂಧಿಸಿದಂತೆ, ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಈಗಿನ ಪ್ರತಿ ಮೀಟರ್‌ಗೆ ರೂ.300.00 ರಿಂದ ರೂ.600.00 ಕ್ಕೆ ಹೆಚ್ಚಿಸಲಾಗುವುದು".***

ಹಾಲಿ ರಸ್ತೆ ದುರಸ್ಥಿ ಕೆಲಸವನ್ನು ಸಂಬಂಧಪಟ್ಟ ಏಜೆನ್ಸಿಗಳು ಅವರದೇ ವೆಚ್ಚದಲ್ಲಿ ನಿರ್ವಹಿಸುತ್ತಿದ್ದು, ಪ್ರತಿ ಮೀಟರ್‌ಗೆ ವಿಧಿಸುತ್ತಿರುವ ದರವು ಶುಲ್ಕದ ಭಾಗವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:11-07-2011 ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:152/2012-13 ರಲ್ಲಿ ಓ.ಎಫ್.ಸಿ.ಗೆ ಸಂಬಂಧಿಸಿದಂತೆ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಬಲ್ ಅಳವಡಿಕೆಗೆ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಪ್ರತಿ ಮೀಟರ್‌ಗೆ ರೂ.300/- ರಿಂದ ರೂ.600/- ಗೆ ಹೆಚ್ಚಿಸಲಾಗಿರುತ್ತದೆ. ಇದನ್ನು ತಿದ್ದುಪಡಿ ಮಾಡಿ "ಅಗೆದ ರಸ್ತೆ ದುರಸ್ಥಿ ಪಡಿಸಲು" ಎಂಬುದರ ಬದಲಾಗಿ "ಕೇಬಲ್ ಅಳವಡಿಸಲು ಆರಂಭಿಕ ಶುಲ್ಕ" ಎಂದು ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-02-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಮುಂದೂಡಿದೆ".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 411 / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಧಾನ ಕಾರ್ಯದರ್ಶಿ, ರಾಷ್ಟ್ರೋತ್ಥಾನ ಪರಿಷತ್ ರವರು ಸಲ್ಲಿಸಿರುವ ಮನವಿ ಪತ್ರದಲ್ಲಿ ವಾರ್ಡ್-142(49) ಸುಂಕೇನಹಳ್ಳಿ, ಪೂರ್ಣಚಂದ್ರ ತೇಜಸ್ವಿ ರಸ್ತೆಯಲ್ಲಿರುವ 62*93=(5766.00 ಚ.ಅಡಿ) ಅಡಿಗಳ ವಿಸ್ತೀರ್ಣದ ಖಾಲಿ ನಿವೇಶನವನ್ನು ರಕ್ತನಿಧಿ ಕಟ್ಟಡ ನಿರ್ಮಾಣಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ ರವರಿಗೆ ದೀರ್ಘಾವಧಿ ಗುತ್ತಿಗೆಗೆ ಶುಲ್ಕ ರಹಿತವಾಗಿ ಅಥವಾ ಅತ್ಯಂತ ಕಡಿಮೆ ದರ ನಿಗಧಿಪಡಿಸಿ ನೀಡುವಂತೆ ಕೋರಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೆಂಪೇಗೌಡರ ಉಪ ವಿಭಾಗರವರು ನೀಡಿರುವ ವರದಿಯಂತೆ ಕರ್ನಾಟಕ ಸರ್ಕಾರದ ದಿನಾಂಕ:21-09-2011ರ ಮಾರ್ಗಸೂಚಿ ದರಗಳನ್ವಯ ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ಚದರ ಅಡಿ 1ಕ್ಕೆ ರೂ.2000/-ಗಳು ವಸತಿಯೇತರ ನಿವೇಶನವಾಗಿರುವುದರಿಂದ ಹೆಚ್ಚುವರಿಯಾಗಿ 40% ಸೇರಿಸಿದಲ್ಲಿ ಚದರಡಿ 1ಕ್ಕೆ ರೂ.2800/- ಗಳಾಗುತ್ತದೆ. ಸ್ವತ್ತಿನ ವಿಸ್ತೀರ್ಣ 5766 ಚದರಡಿಗಳಿದ್ದು, 5766*2800=ರೂ.1,61,44,800/- ಗಳಾಗಿದ್ದು, ಶೇ.10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಮೌಲ್ಯ ರೂ.16,14,480/- ಗಳು ಮತ್ತು ಮಾಸಿಕ ರೂ.1,34,540/- ಗಳಾಗುತ್ತದೆಂದು ವರದಿ ಮಾಡಿರುತ್ತಾರೆ.

ಶೇ.100% ಸಮಾಜ ಸೇವೆ ಸಲ್ಲಿಸುತ್ತಿರುವ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿ ದರದಲ್ಲಿ ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದ್ದು, ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆಯೆಂದು ಅಭಿಪ್ರಾಯಿಸಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ಅಭಿಪ್ರಾಯಿಸಿ ಕಡತ ಸಲ್ಲಿಸಿರುತ್ತಾರೆ.

ಆದರೆ, ಇದು ಹೊಸದಾಗಿ ಗುತ್ತಿಗೆಗೆ ನೀಡಲು ಕೋರಿರುವ ಪ್ರಕರಣವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02-06-2003ರ ಸುತ್ತೋಲೆ ಕ್ರಮ ಸಂಖ್ಯೆ:VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದೆಂದಿದೆ.

ಆದ್ದರಿಂದ, ಸದರಿ ಸ್ವತ್ತನ್ನು 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:25-02-2013ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:25-02-2013ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:27–02–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 412/ 2012–13

ಶ್ರೀ. ಗಂಗಭೈರಯ್ಯ ರವರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ದಿನಾಂಕ:26–02–2013 ರಂದು ನಡೆದ ಪಾಲಿಕೆ ಸಭೆಯ ಅಧಿಕ ವಿಷಯ ಸಂಖ್ಯೆ:02(409)/2012–13ಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಕೈಗೊಂಡ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22–02–2013ರ ನಿರ್ಣಯವನ್ನು ಒಪ್ಪಿದೆ ಎಂಬ ನಿರ್ಣಯದ ಬದಲಾಗಿ "ಮಾನ್ಯ ಆಯುಕ್ತರವರ ದಿನಾಂಕ:15–02–2013ರ ಟಿಪ್ಪಣಿಯನ್ನು ಒಪ್ಪಿದೆ" ಎಂದು ತಿದ್ದುಪಡಿ ಮಾಡಿಕೊಳ್ಳುವುದು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಗಂಗಭೈರಯ್ಯ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** ದಿನಾಂಕ:26–02–2013 ರಂದು ನಡೆದ ಪಾಲಿಕೆ ಸಭೆಯ ಅಧಿಕ ವಿಷಯ ಸಂಖ್ಯೆ:02(409)/2012–13ಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಕೈಗೊಂಡ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22–02–2013ರ ನಿರ್ಣಯವನ್ನು ಒಪ್ಪಿದೆ ಎಂಬ ನಿರ್ಣಯದ ಬದಲಾಗಿ "ಮಾನ್ಯ ಆಯುಕ್ತರವರ ದಿನಾಂಕ:15–02–2013ರ ಟಿಪ್ಪಣಿಯನ್ನು ಒಪ್ಪಿದೆ" ಎಂದು ತಿದ್ದುಪಡಿ ಮಾಡಿಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 438 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಮಾನ್ಯ ಆಯುಕ್ತರವರ ದಿನಾಂಕ:20-02-2013 ರಲ್ಲಿ ಹೊರಡಿಸಿರುವ ಕಛೇರಿ ಆದೇಶದಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಅಂದಾಜು ಪಟ್ಟಿಗಳು ಮತ್ತು ಇತರೆ ಪ್ರಸ್ತಾವನೆಗಳನ್ನು ಪ್ರೀ ಆಡಿಟ್ ಮಾಡಲು ಸೂಚಿಸಲಾಗಿದೆ. ಸದರಿ ಪ್ರಕ್ರಿಯೆಯನ್ನು 2013-14ರ ಸಾಲಿನ ಕಾಮಗಾರಿಗಳಿಗೆ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮಾನ್ಯ ಆಯುಕ್ತರವರ ದಿನಾಂಕ:20-02-2013 ರಲ್ಲಿ ಹೊರಡಿಸಿರುವ ಕಛೇರಿ ಆದೇಶದಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಅಂದಾಜು ಪಟ್ಟಿಗಳು ಮತ್ತು ಇತರೆ ಪ್ರಸ್ತಾವನೆಗಳನ್ನು ಪ್ರೀ ಆಡಿಟ್ ಮಾಡಲು ಸೂಚಿಸಲಾಗಿದೆ. ಸದರಿ ಪ್ರಕ್ರಿಯೆಯನ್ನು 2013-14ರ ಸಾಲಿನ ಕಾಮಗಾರಿಗಳಿಗೆ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 439 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್-142ರ ವ್ಯಾಪ್ತಿಯಲ್ಲಿ ಬರುವ ಗಾಂಧೀಬಜಾರ್ ಮುಖ್ಯ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ 175 ಮತ್ತು 176 ರಲ್ಲಿರುವ 30x120 ಅಡಿ ಅಳತೆಯ ಸ್ವತ್ತನ್ನು ನಗರ ಪಾಲಿಕೆಯು ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲು ಭೂ ಸ್ವಾಧೀನಪಡಿಸಿಕೊಂಡಿರುವ ಸಂಬಂಧ ಸ್ವತ್ತಿನ ಮಾಲೀಕರಾದ ಶ್ರೀ. ಬಿ.ಎನ್.ರವಿಕುಮಾರ್ ಎಂಬುವವರು ಪರಿಹಾರ ಮೊತ್ತವನ್ನು ಪಡೆಯದೇ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಮಾನ್ಯ ನ್ಯಾಯಾಲಯಕ್ಕೆ ಮನವಿ ಮಾಡಿದ್ದು, ಮಾನ್ಯ ನ್ಯಾಯಾಲಯವು ಸಂಬಂಧಪಟ್ಟ ಪ್ರಾಧಿಕಾರವು ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಸೂಚನೆ ನೀಡಿರುವ ಮೇರೆಗೆ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ನಿಯಮಾವಳಿ ರೀತ್ಯಾ ಆಯುಕ್ತರವರು ಕ್ರಮ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್-142ರ ವ್ಯಾಪ್ತಿಯಲ್ಲಿ ಬರುವ ಗಾಂಧೀಬಜಾರ್ ಮುಖ್ಯ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ 175 ಮತ್ತು 176 ರಲ್ಲಿರುವ 30x120 ಅಡಿ ಅಳತೆಯ ಸ್ವತ್ತನ್ನು ನಗರ ಪಾಲಿಕೆಯು ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲು ಭೂ ಸ್ವಾಧೀನಪಡಿಸಿಕೊಂಡಿರುವ ಸಂಬಂಧ ಸ್ವತ್ತಿನ ಮಾಲೀಕರಾದ ಶ್ರೀ. ಬಿ.ಎನ್.ರವಿಕುಮಾರ್ ಎಂಬುವವರು ಪರಿಹಾರ ಮೊತ್ತವನ್ನು ಪಡೆಯದೇ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಮಾನ್ಯ ನ್ಯಾಯಾಲಯಕ್ಕೆ ಮನವಿ ಮಾಡಿದ್ದು, ಮಾನ್ಯ ನ್ಯಾಯಾಲಯವು ಸಂಬಂಧಪಟ್ಟ ಪ್ರಾಧಿಕಾರವು ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಸೂಚನೆ ನೀಡಿರುವ ಮೇರೆಗೆ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ನಿಯಮಾವಳಿ ರೀತ್ಯಾ ಆಯುಕ್ತರವರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 440 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್-155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ, ರಂಗ ಕಲಾವಿದ ಶ್ರೀ. ಎ.ಎಸ್.ಮೂರ್ತಿರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್-155ರ ವ್ಯಾಪ್ತಿಯ ರಾಮಾಂಜನೇಯ ಗುಡ್ಡದಲ್ಲಿ ಹೊಸದಾಗಿ ಕಟ್ಟಿರುವ ರಂಗಮಂದಿರಕ್ಕೆ, ರಂಗ ಕಲಾವಿದ ಶ್ರೀ. ಎ.ಎಸ್.ಮೂರ್ತಿರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 441 / 2012-13**

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-38ರ ವ್ಯಾಪ್ತಿಯ ಪೀಣ್ಯಾದಲ್ಲಿ ನಿರ್ಮಿಸಲಾಗಿರುವ ಕ್ರೀಡಾಂಗಣಕ್ಕೆ "ದಿವಂಗತ ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-38ರ ವ್ಯಾಪ್ತಿಯ ಪೀಣ್ಯಾದಲ್ಲಿ ನಿರ್ಮಿಸಲಾಗಿರುವ ಕ್ರೀಡಾಂಗಣಕ್ಕೆ "ದಿವಂಗತ ಆರ್.ರಾಜಣ್ಣ ಕ್ರೀಡಾಂಗಣ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ : 442 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-160, ರಾಜರಾಜೇಶ್ವರಿ ನಗರ ಮಾವಿನತೋಪು ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ, ಬಿ.ಇ.ಎಂ.ಎಲ್ ಬಡಾವಣೆ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-160, ರಾಜರಾಜೇಶ್ವರಿ ನಗರ ಮಾವಿನತೋಪು ಉದ್ಯಾನವನಕ್ಕೆ "ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನ, ಬಿ.ಇ.ಎಂ.ಎಲ್ ಬಡಾವಣೆ" ಎಂದು ನಾಮಕರಣ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:26-02-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (391) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಪೌರ ನಿಗಮಗಳ ಕಾಯ್ದೆ ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ:01-04-2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಸದರಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಆಸ್ತಿ ತೆರಿಗೆ ಬ್ಲಾಕ್ ಪದ್ಧತಿಯು ದಿನಾಂಕ:31-03-2011ಕ್ಕೆ ಮೂರು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವ ಹಿನ್ನಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಉಪಯೋಗದ ಸ್ವತ್ತುಗಳಿಗೆ ಶೇಕಡ 20 ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25 ರಂತೆ ದರಗಳನ್ನು ಪರಿಷ್ಕರಿಸುವಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:18-03-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:266/2010-11 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತಾರೆ.

> "ಕೆ.ಎಂ.ಸಿ. ಕಾಯ್ದೆ 108 (ಎ) (16) ರ ಅನುಸಾರ ಪ್ರತಿ ಮೂರು ವರ್ಷಕ್ಕೊಮ್ಮೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಪಾಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕಾಯ್ದೆ ಪ್ರಕಾರ ಎಸ್.ಎ.ಎಸ್. ಪದ್ಧತಿಯನ್ನು 2008-09ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಬ್ಲಾಕ್ ಅವಧಿಯು ದಿನಾಂಕ;01-04-2011 ರಿಂದ ಪ್ರಾರಂಭಗೊಳ್ಳಲಿರುವುದರಿಂದ ಕಾಯ್ದೆ ಪ್ರಕಾರ ವಸತಿ ಉಪಯೋಗದ ಆಸ್ತಿಗಳಿಗೆ ಶೇಕಡ 20 ರಷ್ಟನ್ನು ವಸತಿಯೇತರ ಕಟ್ಟಡಗಳಿಗೆ ಶೇಕಡ 25 ರಷ್ಟನ್ನು ದಿನಾಂಕ:01-04-2011 ರಿಂದ ಪರಿಷ್ಕರಣೆ ಮಾಡಲು ಆಯುಕ್ತರು ದಿನಾಂಕ: 11-03-2011 ರಂದು ಟಿಪ್ಪಣಿ ಮಂಡಿಸಿರುತ್ತಾರೆ.
>
> ಸಾರ್ವಜನಿಕರು, ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಜನಪ್ರತಿನಿಧಿಗಳು ಮುಂದುವರೆದ ಬ್ಲಾಕ್ ಅವಧಿಯಲ್ಲಿ ಆಸ್ತಿ ತೆರಿಗೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಬಾರದೆಂದು ಒತ್ತಾಯಿಸಿರುತ್ತಾರೆ.
>
> ಈ ಬ್ಲಾಕ್ ಅವಧಿಯಲ್ಲಿ ಶೇಕಡ 3 ರಷ್ಟನ್ನು ಕಟ್ಟಡ ಸವಕಳಿಗಾಗಿ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ, ದಿನಾಂಕ:1-04-2008 ರಿಂದ ಪ್ರಾರಂಭವಾದ ಈಗಿರುವ ಬ್ಲಾಕ್ ಅವಧಿಯನ್ನು 3 ವರ್ಷಗಳಿಂದ 5 ವರ್ಷಗಳಿಗೆ ಹೆಚ್ಚಿಸಿ, ಅಂದರೆ ಮುಂದಿನ ಎರಡು ವರ್ಷಗಳಿಗೆ (ದಿನಾಂಕ: 01-04-2011 ರಿಂದ 30-03-2013ಕ್ಕೆ) ಹಾಲಿ ಇರುವ ದರವನ್ನೇ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ ಮುಂದುವರೆಸಲು ಹಾಗೂ ಯಾವುದೇ ಕಟ್ಟಡದ ವಯಸ್ಸಿನ ಸವಕಳಿಯನ್ನು ಈ ಮುಂದುವರೆದ ಅವಧಿಗೆ ವಿಸ್ತರಿಸದಿರಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದ್ದು, ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಸರ್ಕಾರವನ್ನು ಕೋರುವ ಬಗ್ಗೆ ಸಭೆಯು ಸರ್ವಾನುಮತದಿಂದ ತೀಮಾನಿಸಲಾಯಿತು".

ಮೇಲ್ಕಂಡ ನಗರ ಪಾಲಿಕೆಯ ನಿರ್ಣಯಕ್ಕೆ ಸೂಕ್ತ ತಿದ್ದುಪಡಿ ತರಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರವು ತನ್ನ ಪತ್ರದ ಸಂಖ್ಯೆ: ನಅಇ 216 ಎಂಎನ್‌ಯು 2011 ದಿನಾಂಕ:10-11-2011 ರಲ್ಲಿ ಕೆಲವೊಂದು ಮಾಹಿತಿಗಳನ್ನು ಕೋರಲಾಗಿದ್ದು, ನಗರ ಪಾಲಿಕೆಯು ಸದರಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ದಿನಾಂಕ:25-01-2012 ರಂದು ಸರ್ಕಾರಕ್ಕೆ

ಮಾಹಿತಿಗಳನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧ ತಹಲ್‌ವರೆವಿಗೂ ಸರ್ಕಾರದಿಂದ ಯಾವುದೇ ಮಾಹಿತಿ/ತಿದ್ದುಪಡಿ ಆದೇಶ ಬಂದಿರುವುದಿಲ್ಲ ಹಾಗೂ ಮಹಾಲೇಖಪಾಲಕರು, ಕರ್ನಾಟಕ (ಕೇಂದ್ರ ಸರ್ಕಾರ) ರವರು ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಮಾಡಲು ಕಾಯ್ದೆಯಲ್ಲಿ ಅವಕಾಶವಿದ್ದರೂ ಸಹ ನಗರ ಪಾಲಿಕೆಯು ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಡಿಟ್ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

ಮುಂದುವರೆದಂತೆ, 2008-09ನೇ ಸಾಲಿನಲ್ಲಿ ಜಾರಿಗೆ ತರಲಾಗಿರುವ ಪ್ರದೇಶವಾರು ಯೂನಿಟ್ ಏರಿಯಾ ಆಸ್ತಿ ತೆರಿಗೆ ದರವು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯು 2000ನೇ ಸಾಲಿನಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ನಿಗದಿಪಡಿಸಲಾಗಿರುವ ದರಗಳನ್ನೇ ಪ್ರಸ್ತುತ ನಿಗದಿಪಡಿಸಲಾಗಿದ್ದು, ಅಂದಿನಿಂದ ಇಂದಿನವರೆಗೂ ದರಗಳು ಪರಿಷ್ಕರಣೆ ಆಗಿರುವುದಿಲ್ಲ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ:31-03-2011ಕ್ಕೆ ಮೂರು ವರ್ಷಗಳ ಅವಧಿಗೆ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ದಿನಾಂಕ:01-04-2011 ರಿಂದಲೇ ಜಾರಿಗೆ ತರಬೇಕಾಗಿದೆ. ಈ ಪರಿಷ್ಕರಣೆಯು ಮುಂದಿನ 3 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಕಾಯ್ದೆಯಲ್ಲಿ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಗಿರುವುದರಿಂದ ಮತ್ತು ದಿನಾಂಕ:01-04-2011 ರಿಂದಲೇ ಮತ್ತೆ ಕಟ್ಟಡ ಇಳುವರಿ ನೀಡಬೇಕಾಗಿರುವುದರಿಂದ ಪ್ರಸ್ತುತ ಜಾರಿಯಲ್ಲಿರುವ ದರಗಳನ್ನು ಪರಿಷ್ಕರಿಸಿ ದಿನಾಂಕ:01-04-2011 ರಿಂದಲೇ ಜಾರಿಗೊಳಿಸಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ನಗರ ಪಾಲಿಕೆಯು ತೀರ್ಮಾನಿಸಿದಂತೆ 3 ವರ್ಷಗಳ ಅವಧಿಯಿಂದ 5 ವರ್ಷಗಳ ಅವಧಿಗೆ ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಸಂಬಂಧ ಸರ್ಕಾರದಿಂದ ಯಾವುದೇ ತಿದ್ದುಪಡಿ ಆದೇಶ ಹೊರಡಿಸದೆ ಇರುವ ಹಿನ್ನಲೆಯಲ್ಲಿ ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಕಲಂ 108(ಎ)(16)ರ ಅನುಸಾರ ಮೇಲ್ಕಂಡಂತೆ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಾರಿಗೆ ತರುವ ಪ್ರಸ್ತಾವನೆಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಕೋರಿ ದಿನಾಂಕ:09-07-2012 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಿದ್ದು, ಅದಕ್ಕೆ ದಿನಾಂಕ:21-08-2012 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ:ತೆಆಸ್ಥಾಸ 95/2012-13 ರಲ್ಲಿ ಆಯುಕ್ತರವರ ದಿನಾಂಕ:09-07-2012ರ ಟಿಪ್ಪಣಿಯನ್ನು ಪರಿಶೀಲಿಸಿದ ನಂತರ ಹಾಲಿ ಇರುವ ವಲಯಗಳ ವರ್ಗೀಕರಣವನ್ನು ಪರಿಷ್ಕರಿಸುವ ಅವಶ್ಯಕತೆ ಇರುವುದರಿಂದ ಪ್ರಸ್ತಾವನೆಯನ್ನು ಪರಿಷ್ಕರಿಸಿ ಮರು ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ತೀರ್ಮಾನದಂತೆ ಪ್ರಸ್ತುತ ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು 2011 ರಲ್ಲಿ ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ಸಿದ್ಧಪಡಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ನಗರ ಪಾಲಿಕೆ ಸಭೆಯ ದಿನಾಂಕ:18-03-2011ರ ವಿಷಯದ ಸಂಖ್ಯೆ;266/2010-11 ರಲ್ಲಿನ ನಿರ್ಣಯದಂತೆ, 2013-14ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ:01-04-2013 ರಿಂದ ಪ್ರಾರಂಭಗೊಳ್ಳುತ್ತಿರುವುದರಿಂದ ಕೆ.ಎಂ.ಸಿ. ಕಾಯ್ದೆಯ ನಿಯಮಗಳಂತೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಟ ಶೇಕಡ 30 ರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಟ ಶೇಕಡ 15, ಗರಿಷ್ಟ 30 ರಷ್ಟು ಹೆಚ್ಚಿಸಲು ಮತ್ತು ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು 2011 ರಲ್ಲಿ ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ಜಾರಿಗೊಳಿಸಲು ಹಾಗೂ ನಗರ ಪಾಲಿಕೆ ಸಭೆಯು ಕೈಗೊಳ್ಳುವ ನಿರ್ಣಯಕ್ಕೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ದಿನಾಂಕ:01-04-2013 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-01-2013ರ

.........................3

ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆಯ ವಿವೇಚನೆಗೆ ಬಿಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 02-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಲಯ ವರ್ಗೀಕರಣವನ್ನು ಮಾತ್ರ ಜಾರಿಗೊಳಿಸಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಲಯ ವರ್ಗೀಕರಣವನ್ನು ಮಾತ್ರ ಜಾರಿಗೊಳಿಸಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು